# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ

No.1 Leading in Local News Paper

80,000

HAMPI TIMES E-PAPER READERS



94486 33038 | NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201



| | | | | | | | |
|---|---|---|---|---|---|---|---|
| ಸಂಪುಟ:02 | ಸಂಚಿಕೆ: 31 | ಆರ್.ಎನ್.ಐ. ನಂ.:KARKAN/2023/88055 | ವಿಜಯನಗರ | 26.07.2024 | ಶುಕ್ರವಾರ | ಪುಟ:04 | ಬೆಲೆ:2 |
| Volume:02 | Issue: 31 | RNI No:KARKAN/2023/88055 | VIJAYANAGARA | 26.07.2024 | Friday | Page:04 | Rs:2 |



ಮನಸ್ಸು ಮಾಡು ಕರ್ತವ್ಯ ನಿಷ್ಠನಾಗು ಕಾದು ನೋಡು

ಪುಟ: 4ರಲ್ಲಿ ನೋಡಿ

ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!

ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ

SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...

ಹಂಪಿ ಟೈಮ್ಸ್ ಇ-ಪೇಪರ್

94486 33038 | www.hampitimes.com / epaper.hampitimes.com | Vijayanagara | hampitimes@gmail.com

ಹಂಪಿ ಟೈಮ್ಸ್ ಮಾರ್ಗದರ್ಶಿ ಇ-ಪೇಪರ್‌ನಲ್ಲೂ ಲಭ್ಯ ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com


# ಡೆಂಗ್ಯೂ ಸೊಳ್ಳೆಗಳ ಉತ್ಪತ್ತಿ ತಾಣ ಅಶುಚಿತ್ವದ ಖಾಲಿ ನಿವೇಶನಗಳು!

### ತ್ಯಾಜ್ಯ ಸಂಗ್ರಹ ಘಟಕಗಳಾಗುತ್ತಿರುವ ಖಾಲಿ ನಿವೇಶನಗಳು! | ಅಕ್ಕಪಕ್ಕದ ನಿವಾಸಿಗಳ ಗೋಳು ಕೇಳೋರ್‍ಯಾರು?

### ನಿವೇಶನಗಳು ಸ್ವಚ್ಛವಾಗಿಡದಿದ್ದರೆ ಕ್ಲೀನಿಂಗ್ ವೆಚ್ಚ ಆಸ್ತಿ ತೆರಿಗೆಗೆ ಸೇರ್ಪಡೆ ಪೌರಾಯುಕ್ತರಿಂದ ಎಚ್ಚರಿಕೆ

### ಖಾಲಿ ನಿವೇಶನ ಮಾಲೀಕರಿಗೆ ಭೂಮಿ ಬೆಲೆ ಏರಿಕೆಯ ಚಿಂತೆ | ಅಕ್ಕಪಕ್ಕದ ನಿವಾಸಿಗಳಿಗೆ ಪ್ರಾಣ ಸಂಕಟ

**ಹಂಪಿ ಟೈಮ್ಸ್ ಹೊಸಪೇಟೆ**

ಹೆಚ್ಚುತ್ತಿರುವ ಡೆಂಗ್ಯು ಪ್ರಕರಣಗಳು ನಗರದ ಜನತೆಯನ್ನು ನಿದ್ದೆಗೆಡಿಸಿದೆ. ಆರೋಗ್ಯ ಇಲಾಖೆ ಡೆಂಗ್ಯೂ ತಡೆಗೆ ಜಾಗೃತಿ ಮೂಡಿಸಲು ನಾನಾ ಕಸರತ್ತು ನಡೆಸುತ್ತಿದೆಯಾದರೂ, ಸಂಬಂಧಪಟ್ಟ ವಿವಿಧ ಇಲಾಖೆಗಳು ಮೌನಕ್ಕೆ ಜಾರಿವೆ.

ನಗರಸಭೆ ವ್ಯಾಪ್ತಿಯಲ್ಲಿ ಖಾಸಗಿ ಖಾಲಿ ನಿವೇಶನಗಳು ಸೇರಿದಂತೆ ಚರಂಡಿ, ಕಾಲುವೆಗಳ ಅಶುಚಿತ್ವದಿಂದ ಎಲ್ಲಡೆ ಮೂಗಿಗೆ ಅಪ್ಪಳಿಸುವ ಗಬ್ಬುವಾಸನೆಗೆ ಜನರು ಹೈರಾಣಾಗುತ್ತಿದ್ದಾರೆ. ಮತ್ತೊಂದೆಡೆ ಖಾಲಿ ನಿವೇಶನಗಳು ಡಂಗ್ಯೂ ಸೊಳ್ಳೆ ಉತ್ಪತ್ತಿಯ ಕೇಂದ್ರಗಳಾಗುತ್ತಿವೆ. ಖಾಲಿ ನಿವೇಶನಗಳು ಗಿಡಗಂಟಿ, ತ್ಯಾಜ್ಯದಿಂದ ತುಂಬಿಕೊಂಡು ವಿಷಜಂತುಗಳ ವಾಸಸ್ಥಾನಗಳಾಗುತ್ತಿವೆ. ನಗರದೆಲ್ಲಡೆ ಸ್ವಚ್ಛತೆ ಮೈಮರೆತಿರುವ ನಗರಸಭೆ ವಿರುದ್ಧ ಜನರು ಆಕ್ರೋಶ ಹೊರಹಾಕಿದ್ದು, ಡೆಂಗ್ಯು ಹರಡಿ ಜೀವಹಾನಿಯಾದರೆ, ಯಾರು ಹೊಣೆ ಎಂದು ಆಡಳಿತ ವ್ಯವಸ್ಥೆಯನ್ನೆ ಜನ ಪ್ರಶ್ನಿಸುತ್ತಿದ್ದಾರೆ.

ನಗರದಲ್ಲಿ ಮನೆಗಳಿಗಿಂತ ಖಾಲಿ ನಿವೇಶನಗಳೇ ಅಧಿಕ ಎನ್ನುವಂತಾಗಿದೆ. ವಿಜಯನಗರ ಜಿಲ್ಲೆ ಘೋಷಣೆಗೂ ಮುನ್ನ ನಗರದಲ್ಲಿ ಭಾರಿ ಸದ್ದು ಮಾಡಿದ್ದ ರಿಯಲ್ ಎಸ್ಟೇಟ್ ಇದೀಗ ಮಕಾಡೆ ಮಲಗಿದೆ. ಜನಸಾಮಾನ್ಯರು ಮನೆ ಕಟ್ಟಿಕೊಳ್ಳಲು ನಗರದಲ್ಲಿ ಹುಡುಕಾಡಿದರೂ ಸರ್ಕಾರಿ ಬೆಲೆಯಲ್ಲಿ ನಿವೇಶನ ದೊರೆಯದಂತಾಗಿದೆ. ಇರುವ ಅಲ್ಲಲ್ಲಿ ಖಾಲಿ ನಿವೇಶನಗಳನ್ನು ಹಣವಂತರು ಖರೀದಿಸಿ ಕಾಯ್ದಿರಿಸಿಕೊಂಡಿದ್ದಾರೆ. ನಿವೇಶನ ಖರೀದಿಸಿದವರು ಆ ಸ್ಥಳದಲ್ಲಿ ಕಟ್ಟಡ ನಿರ್ಮಿಸದೆ ಖಾಲಿ ಇರಿಸಿದ್ದರಿಂದ, ಅವರಿವರು ಹಾಕುವ ತ್ಯಾಜ್ಯದಿಂದ ತುಂಬಿ ತುಳುಕುತ್ತಿವೆ. ನಿತ್ಯ ಮನೆಯ ಕಸವನ್ನು ಅನೇಕರು ನಗರಸಭೆ ವಾಹನಕ್ಕೆ ಕೊಡದೇ, ರಾತ್ರೋ ರಾತ್ರಿ ಖಾಲಿ ನಿವೇಶನದಲ್ಲಿ ತಂದು ಎಸೆಯುತ್ತಿದ್ದಾರೆ. ಕಸದ ರಾಶಿಯಲ್ಲಿನ ಅನುಪಯುಕ್ತ ಪ್ಲಾಸ್ಟಿಕ್ ಕಪ್ಸ್ ಸೇರಿದಂತೆ ಇನ್ನಿತರ ವಸ್ತುಗಳಲ್ಲಿ ನೀರು ಸಂಗ್ರಹಗೊಂಡು ಡೆಂಗ್ಯೂ ಸೊಳ್ಳೆ ಉತ್ಪತ್ತಿ ಕೇಂದ್ರಗಳಾಗಬಹುದು. ಇದರಿಂದ ಜನರ ಪ್ರಾಣಕ್ಕೆಕುತ್ತುಬರಬಹುದು ಎಂದು ಆರೋಗ್ಯಾಧಿಕಾರಿಗಳು ಹೇಳುತ್ತಾರೆ. ನಗರಸಭೆಯು ನಗರದ ನಿವಾಸಿಗಳಿಂದ ನಾನಾ ತೆರಿಗಳನ್ನು ಒಟ್ಟುಗೂಡಿಸಿ ಸಂಪೂರ್ಣ ತೆರಿಗೆ ಸಂಗ್ರಹಿಸುತ್ತಿದೆಯಾದರೂ, ನಗರಸಭೆ 35 ವಾರ್ಡ್‌ಗಳಲ್ಲಿ ಸಮರ್ಪಕ ಸ್ವಚ್ಛತೆಗೆ ಆದ್ಯತೆ ನೀಡದಿರುವುದು ಜನರಲ್ಲಿ ಬೇಸರ ಮೂಡಿಸಿದೆ.







> ಟೀ, ನೀರು ಕುಡಿದು ಬೀಸಾಡುವ ಕಪ್ಪುಗಳು, ಕಸದ ರಾಶಿಯಲ್ಲಿ ನೀರು ನಿಂತರೆ ಅಲ್ಲಿ ಸೊಳ್ಳೆ ಉತ್ಪತ್ತಿಯಾಗುವ ಸಾಧ್ಯತೆಗಳು ಹೆಚ್ಚಾಗಿವೆ. ಡೆಂಗ್ಯೂ ಹರಡುವಿಕೆ ತಡೆಗೆ ಎಲ್ಲೆಡೆ ಶುಚಿಯಾಗಿರುವಂತೆ ಎಲ್ಲರೂ ಗಮನಹರಿಸಬೇಕು. ಖಾಲಿ ನಿವೇಶನಗಳಲ್ಲಿನ ತ್ಯಾಜ್ಯವೂ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ.
>
> – ಶಂಕರ ನಾಯ್ಕ ಡಿಎಚ್‌ಒ, ವಿಜಯನಗರ

> ನಗರಸಭೆ ವ್ಯಾಪ್ತಿಯಲ್ಲಿ ನಿವೇಶನಗಳನ್ನು ಖರೀದಿಸಿ, ಕಟ್ಟಡ ಕಟ್ಟದೆ ಹಾಗೆ ಬಿಟ್ಟಿರುವ ಖಾಲಿ ನಿವೇಶನಗಳ ಮಾಲೀಕರುಗಳು ತಮ್ಮ ನಿವೇಶನಗಳನ್ನು ಸ್ವಚ್ಛತೆಯಿಂದ ಕಾಪಾಡಬೇಕು. ನಿರ್ಲಕ್ಷ್ಯವಹಿಸಿದರೆ, ಜನರ ಆರೋಗ್ಯದ ದೃಷ್ಟಿಯಿಂದ ಸ್ವಚ್ಛತೆ ಕೈಗೊಂಡು ಅದರ ಸಂಪೂರ್ಣ ವೆಚ್ಚವನ್ನು ಅವರ ಅವರ ಆಸ್ತಿ ತೆರಿಗೆಗೆ ಸೇರ್ಪಡೆ ಮಾಡಲು ಸೂಕ್ತ ಕ್ರಮವಹಿಸಲಾಗುವುದು.
>
> – ಮನೋಹರ
> ಪೌರಾಯುಕ್ತರು, ನಗರಸಭೆ, ಹೊಸಪೇಟೆ.

ಚರಂಡಿಯಲ್ಲಿ ಹರಿಯುವ ನೀರಿಗಿಂತ, ನಾನಕಡೆ ತ್ಯಾಜ್ಯದಲ್ಲಿ ನಿಂತ ನೀರಲ್ಲೆ ಡೆಂಗ್ಯೂ ಸೊಳ್ಳೆ ಉತ್ಪತ್ತಿಯಾಗುತ್ತವೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಎಚ್ಚರಿಕೆ ನೀಡಿದ್ದರೂ, ಸಂಬಂಧಿಸಿದ ಅನೇಕ ಅಧಿಕಾರಿಗಳು ಎಚ್ಚೆತ್ತುಕೊಳ್ಳುತ್ತಿಲ್ಲ ಎಂಬುದು ಗೋಚರಿಸುತ್ತಿದೆ. ಬೆಕ್ಕಿಗೆ ಚೆಲ್ಲಾಟವಾದರೆ, ಇಲಿಗೆ ಪ್ರಾಣ ಸಂಕಟ ಎಂಬಂತೆ ಶುಚಿಯಾಗಿಡದ ಖಾಲಿ ನಿವೇಶನಗಳ ಮಾಲೀಕರಿಗೆ ಭೂಮಿ ಬೆಲೆ ಏರಿಕೆಯ ಚಿಂತೆಯಾದರೆ, ನಗರಸಭೆಗೆ ತೆರಿಗೆ ಚಿಂತೆ. ಆದರೆ ಖಾಲಿ ನಿವೇಶನಗಳ ಅಕ್ಕಪಕ್ಕ ವಾಸಿಸುವ ನಿವಾಸಿಗಳಿಗೆ ಪ್ರಾಣ ಸಂಕಟವಾಗಿದೆ. ಐಷರಾಮಿ ಜೀವನ ನಡೆಸುವ ಉನ್ನತವರ್ಗದವರಿಗೆ ಸಾಮಾನ್ಯ ಜನರ ಗೋಳು ಕೇಳುವುದು

ಎನ್ನುವುದನ್ನು ನಗರಸಭೆ ಅಧಿಕಾರಿಗಳು ಇನ್ನಾದರೂ ಎಚ್ಚೆತ್ತುಕೊಂಡು, ನಗರದ ಜನತೆಯ ಆರೋಗ್ಯ ಕಾಪಾಡುವಲ್ಲಿ ಸೂಕ್ತ ಕ್ರಮವಹಿಸಬೇಕು ಎಂದು ಜನರು ಒತ್ತಾಯಿಸಿದ್ದಾರೆ.

**ಮೈಕ್ರೋ ನ್ಯೂಸ್**

## ನದಿಪಾತ್ರದ ಗ್ರಾಮಗಳಿಗೆ ತಾಲೂಕುವಾರು ಮೇಲ್ವಿಚಾರಣಾಧಿಕಾರಿಗಳ ನೇಮಕ

**ಹಂಪಿ ಟೈಮ್ಸ್ ಹೊಸಪೇಟೆ**

ತುಂಗಭದ್ರ ನದಿ ಪಾತ್ರದ ಗ್ರಾಮಗಳಿಗೆ ಗ್ರಾಮವಾರು ನೋಡಲ್ ಅಧಿಕಾರಿಗಳಿಗೆ ತಾಲೂಕುವಾರು ಮೇಲ್ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಆದೇಶ ಹೊರಡಿಸಿದ್ದಾರೆ.

2024-25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಅತಿಯಾದ ಮಳೆಯಿಂದಾಗಿ ತುಂಗಾಭದ್ರಾ ನದಿಯಲ್ಲಿ ಪ್ರವಾಹ ಉಂಟಾಗುವ ಸಾಧ್ಯತೆ ಇರುವ ಕಾರಣ ಜಿಲ್ಲೆಯಲ್ಲಿ ನದಿ ಪಾತ್ರದಲ್ಲಿ ಬರುವ ಒಟ್ಟು 11 ಗ್ರಾಮ ಪಂಚಾಯಿತಿಗೆ ಸಂಬಂಧಿಸಿದ 22 ಗ್ರಾಮಗಳಿಗೆ ನೋಡಲ್ ಅಧಿಕಾರಿಗಳನ್ನು ಈಗಾಗಲೇ ನೇಮಕ ಮಾಡಲಾಗಿದ್ದು, ಆ ನೋಡಲ್ ಅಧಿಕಾರಿಗಳಿಗೆ ತಾಲೂಕುವಾರು ಮೇಲ್ವಿಚಾರಣಾಧಿಕರಿಗಳನ್ನು ನೇಮಕ ಮಾಡಲಾಗಿದೆ.

ಹೊಸಪೇಟೆಯ ಸಹಾಯಕ ಆಯುಕ್ತರನ್ನು ಹೊಸಪೇಟೆ ತಾಲೂಕಿಗೆ, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿಗಳನ್ನು ಹಗರಿ ಬೊಮ್ಮನ ಹಳ್ಳಿ ತಾಲೂಕಿಗೆ, ಹರಪನಹಳ್ಳಿಯ ಸಹಾಯಕ ಆಯುಕ್ತರನ್ನು ಹರಪನಹಳ್ಳಿ ತಾಲೂಕಿಗೆ, ಕೃಷಿ ಇಲಾಖೆಯ ಜಂಟಿ ನಿರ್ದೇಶಕರನ್ನು ಹಡಗಲಿ ತಾಲೂಕಿಗೆ ನೋಡಲ್ ಅಧಿಕಾರಿಗಳನ್ನಾಗಿ ನೇಮಕ ಮಾಡಿದ್ದು, ಅಧಿಕಾರಿಗಳು ಆಯಾ ಗ್ರಾಮಗಳಿಗೆ ಖುದ್ದಾಗಿ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿ ಹಾಲಿ ವಸ್ತು ಸ್ಥಿತಿಯ ಕುರಿತು ಅನುಪಾಲನಾ ವರದಿ ಸಲ್ಲಿಸಬೇಕು ಹಾಗೂ ಕಾಲಕಾಲಕ್ಕೆ ಕೇಳಲಾಗುವ ವರದಿಗಳನ್ನು ಯಾವುದೇ ವಿಳಂಬವಿಲ್ಲದೆ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

## ಇಂದು ವಿಶ್ವ ಜನಸಂಖ್ಯಾ ದಿನಾಚರಣೆ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಜುಲೈ 26 ರಂದು ಬೆಳಿಗ್ಗೆ 10 ಗಂಟೆಗೆ ತಾಲೂಕು ಪಂಚಾಯತ್ ವಿದ್ಯಾರಣ್ಯ ಸಭಾಂಗಣದಲ್ಲಿ ವಿಶ್ವ ಜನಸಂಖ್ಯಾ ದಿನಾಚರಣೆ ನಡೆಯಲಿದೆ.

ವಸತಿ, ವಕ್ಸ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ವಿಜಯನಗರ ಜಿಲ್ಲೆ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಉದ್ಘಾಟಿಸುವರು. ಶಾಸಕ ಹೆಚ್.ಆರ್. ಗವಿಯಪ್ಪ ಅಧ್ಯಕ್ಷತೆ ವಹಿಸುವರು. ನಗರಸಭೆ ಹೊಸಪೇಟೆಯ ಅಧ್ಯಕ್ಷರಾದ ಎ.ಲತಾ, ಹುಡಾ ಅಧ್ಯಕ್ಷ ಎಚ್.ಎನ್.ಮಹಮದ್ ಇಮಾಮ್ ನಿಯಾಜಿ, ವಿಶೇಷ ಆಹ್ವಾನಿತರಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ಹರ್ಷಗುಪ್ತ, ವಿಜಯನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ನವೀನ್‌ರಾಜ್ ಸಿಂಗ್, ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ನೊಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಂ ಶಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿಬಾಬು ಬಿ.ಎಲ್., ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಶಂಕರ್ ನಾಯ್ಕ, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ.ವಿನಯ್ ಭಾಗವಹಿಸುವರು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ತಿಳಿಸಿದೆ.

## ಟಿಬಿಡ್ಯಾಂ 30 ಗೇಟ್‌ಗಳಿಂದ ನದಿಗೆ ನೀರು



**ಹಂಪಿ ಟೈಮ್ಸ್ ಹೊಸಪೇಟೆ**

ತುಂಗಭದ್ರಾ ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಹೆಚ್ಚಾಗಿದ್ದರಿಂದ ತುಂಗಭದ್ರಾ ಮಂಡಳಿ ಅಧಿಕಾರಿಗಳು ಗುರುವಾರ ಸಂಜೆ 5ಕ್ಕೆ ಜಲಾಶಯ ಅಣೆಕಟ್ಟಿನ 30 ಗೇಟ್‌ಗಳನ್ನು ಎತ್ತಿ ನದಿಗೆ ನೀರು ಹರಿಬಿಟ್ಟಿದ್ದಾರೆ.

ಗುರುವಾರ ಸಂಜೆ ಜಲಾಶಯದ ನೀರಿನ ಮಟ್ಟ 1632.20 ಅಡಿಗೆ ತಲುಪಿದೆ. 102.576 ಟಿಎಂಸಿ ನೀರು ಸಂಗ್ರಹಗೊಂಡಿದೆ. ಜಲಾಶಯದ ಗರಿಷ್ಠ ಮಟ್ಟ 1633 ಅಡಿಯಾಗಿದ್ದು, ಇದೀಗ ಜಲಾಶಯ ಬಹುತೇಕ ಭರ್ತಿಯಾಗಿದೆ.. 81,030 ಕ್ಯುಸೆಕ್ ಒಳಹರಿವಿದೆ. ನದಿ ಹಾಗೂ ಕಾಲುವೆಗಳು ಸೇರಿ ಒಟ್ಟು 75,774 ಕ್ಯುಸೆಕ್ ನೀರು ಹರಿಬಿಡಲಾಗಿದೆ. ಜಲಾಶಯದ ಒಳಹರಿವಿನಲ್ಲಿ ಹೆಚ್ಚಾಗುವ ಸಾಧ್ಯತೆಯಿದ್ದು, ಯಾವುದೇ ಕ್ಷಣದಲ್ಲಿ 1 ಲಕ್ಷದಿಂದ 1.50 ಲಕ್ಷ ಕ್ಯುಸೆಕ್ ನೀರು ಹರಿಬಿಡಬಹುದಾಗಿದೆ. ನದಿಪಾತ್ರದ ಜನರು ಸುರಕ್ಷಿತ ಸ್ಥಳಕ್ಕೆ ತೆರಳಬೇಕು ಎಂದು ಟಿ.ಬಿ.ಬೋರ್ಡ್ ಮಂಡಳಿ ತಿಳಿಸಿದೆ.



## ಕಾನೂನು ಪದವೀಧರರ ವೃತ್ತಿ ತರಬೇತಿ: ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಹೊಸಪೇಟೆ**

2024-25ನೇ ಸಾಲಿನಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹಿಂದುಳಿದ ವರ್ಗದ ಕಾನೂನು ಪದವೀಧರರಿಗೆ ಕಾನೂನು ತರಬೇತಿ ಭತ್ಯೆಗಾಗಿ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆ ದಿನಾಂಕವನ್ನು ಜುಲೈ 31ರವರೆಗೆ ವಿಸ್ತರಿಸಲಾಗಿದೆ.

ಅರ್ಜಿ ಸಲ್ಲಿಸುವ ಅಭ್ಯರ್ಥಿಯು ವಿಜಯನಗರ ಜಿಲ್ಲೆಯವರಾಗಿರಬೇಕು. ಅಭ್ಯರ್ಥಿಗಳು ಪ್ರವರ್ಗ-1, ಪ್ರವರ್ಗ-2(ಎ), ಪ್ರವರ್ಗ-3(ಎ) ಮತ್ತು ಪ್ರವರ್ಗ-3(ಬಿ)ಗೆ ಸೇರಿದವರಾಗಿರಬೇಕು. ಶೇಕಡವಾರು ಪ್ರವರ್ಗ-1ರಲ್ಲಿ 2 ಅಭ್ಯರ್ಥಿಗಳನ್ನು ಅಯ್ಕೆ ಮಾಡಿ ಉಳಿದ ವರ್ಗಗಳಲ್ಲಿ ನಿಯಮಾನುಸಾರ 8 ಅಭ್ಯರ್ಥಿಗಳು ಒಟ್ಟು 10 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಅಭ್ಯರ್ಥಿಯು ಬಾರ್ ಕೌನ್ಸಿಲ್‌ನಲ್ಲಿ ಹೆಸರನ್ನು ನೋಂದಾಯಿಸಿರಬೇಕು. ತರಬೇತಿಗೆ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕಕ್ಕೆ ಹಿಂದೆ 2 ವರ್ಷಗಳೊಳಗಾಗಿ ಕಾನೂನು ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಕಾನೂನು ತರಬೇತಿಯು 4 ವರ್ಷಗಳ ಅವಧಿಯಾಗಿದ್ದು, ತಿಂಗಳಿಗೆ 4 ಸಾವಿರ ತರಬೇತಿ ಭತ್ಯೆ ನೀಡಲಾಗುವುದು. ಕಾನೂನು ತರಬೇತಿಗೆ ವಿಜಯನಗರ ಜಿಲ್ಲೆಯಿಂದ 10 ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಮಾಡಲಾಗುವುದು.

ಪ್ರವರ್ಗ-1ಕ್ಕೆ 2 ಅಭ್ಯರ್ಥಿಗಳು, ಪ್ರವರ್ಗ-2ಎಗೆ 5 ಅಭ್ಯರ್ಥಿಗಳು, ಪ್ರವರ್ಗ-3ಎಗೆ 1 ಅಭ್ಯರ್ಥಿ, ಪ್ರವರ್ಗ-3ಬಿಗೆ 2 ಅಭ್ಯರ್ಥಿಗಳು ಸೇರಿ ಒಟ್ಟು 10 ಅಭ್ಯರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಲಾಗುವುದು.

ಹಿಂದುಳಿದ ವರ್ಗಗಳ ಪ್ರವರ್ಗ-1, ಪ್ರವರ್ಗ-2ಎ, 3ಎ ಹಾಗೂ 3ಬಿ ಅಭ್ಯರ್ಥಿಗಳಿಗೆ 38 ವರ್ಷ ಗರಿಷ್ಠ ವಯೋಮಿತಿ (ಅರ್ಜಿ ಸಲ್ಲಿಸಲು ಇರುವ ಕೊನೆಯ ದಿನಾಂಕಕ್ಕೆ) ಇರುತ್ತದೆ.

ತರಬೇತಿಯ ಅವಧಿಯ ಮಧ್ಯಭಾಗದಲ್ಲಿ ಅಭ್ಯರ್ಥಿಯು ತರಬೇತಿಗೆ ಗೈರು ಹಾಜರಾದಲ್ಲಿ ಪಡೆಯಲಾಗಿರುವ ತರಬೇತಿ ಭತ್ಯೆಯ ಹಣವನ್ನು ಬಡ್ಡಿಯೊಂದಿಗೆ ಪಾವತಿಸಬೇಕಾಗುವುದು. ವಾರ್ಷಿಕ ಆದಾಯದ >> 4

## ವಿಜ್ಞಾನ

# ಬಾವಲಿಗಳು ಏಕೆ ತಲೆಕೆಳಗಾಗಿ ನೇತಾಡುತ್ತವೆ?

■ ಆರ್.ಬಿ.ಗುರುಬಸವರಾಜ

'ಬಾವಲಿಗಳು ಏಕೆ ಹಗಲಿನಲ್ಲಿ ಹಾರಾಡುವುದಿಲ್ಲ?' ಎಂದು ಸಮರ್ಥ ಕೇಳಿದ ಪ್ರಶ್ನೆಯಿಂದ ಪ್ರೇರಣೆಗೊಂಡ ಅನುಷ ತಾನೂ ಒಂದು ಪ್ರಶ್ನೆ ಕೇಳಿದಳು. "ತಾತ ಬಾವಲಿಗಳು ಬೇರೆ ಬೇರೆ ಕಾರಣಗಳಿಗಾಗಿ ಹಗಲಿನಲ್ಲಿ ಹಾರಾಡುವುದಿಲ್ಲ, ಓಕೆ. ಆದರೆ ಅವು ಏಕೆ ತಲೆಕೆಳಗಾಗಿ ನೇತಾಡುತ್ತವೆ?" ಎಂದಳು.

'ಯಾಕೋ ಇದುವರೆಗೂ ನಿನ್ನಿಂದ ಪ್ರಶ್ನೆ ಬರಲಿಲ್ಲ ಅಂದುಕೊಂಡೆ. ಅಂತೂ ಈಗಲಾದರೂ ಪ್ರಶ್ನೆ ಬಂತು. ನೋಡು ಕಂದಾ ಬಾವಲಿಗಳು ನಮ್ಮ ಪರಿಸರದ ವಿಭಿನ್ನ ಜೀವಿಗಳು. ಅವು ಏಕೆ ತಲೆಕೆಳಗಾಗಿ ನೇತಾಡುತ್ತವೆ ಎಂಬುದಕ್ಕೆ ಇದುವರೆಗೂ ನಿರ್ದಿಷ್ಟ ಉತ್ತರಗಳಿಲ್ಲ. ಆದಾಗ್ಯೂ ಸಾಮಿಪ್ಯದ ಸಿದ್ಧಾಂತಗಳಿವೆ. ಬಾವಲಿಗಳು ತಲೆಕೆಳಗಾಗಿ ನೇತಾಡಲು ಅವುಗಳು ವಿಶಿಷ್ಟ ಅಂಗರಚನಾಶಾಸ್ತ್ರಕ್ಕೆ ಸಂಬಂಧಿಸಿದೆ. ಅವುಗಳ ರೆಕ್ಕೆಗಳು ಹಾರಲು ಮಾತ್ರ ವಿನ್ಯಾಸಗೊಂಡಿವೆಯೇ ಹೊರತು ಇತರೆ ಪಕ್ಷಿಗಳಂತೆ ನಿಲ್ಲಲು ಮತ್ತು ನಡೆಯಲು ಅಲ್ಲ ಎಂಬುದನ್ನು ಗಮನಿಸು. ಹಾಗಾಗಿ ಅವು ವಿಶ್ರಾಂತ ಸ್ಥಿತಿಯಲ್ಲಿ ರುವಾಗ ಕಾಲು ಗಳನ್ನು ಮರದ ಟೊಂಗೆ ಗಳಿಗೆ ಬಂಧಿಸಿಕೊಂಡು ಜೋತಾಡುತ್ತವೆ. ಹೀಗೆ ಜೋತಾ ಡುವಾಗ ಇಡೀ ದೇಹವನ್ನು ರೆಕ್ಕೆಗಳಿಂದ ಮುಚ್ಚಿ ಕೊಂಡಿರುತ್ತವೆ. ಇದು ಅನ್ಯ ಜೀವಿಗಳಿಂದ ರಕ್ಷಿಸಿ ಕೊಳ್ಳುವ ಉಪಾ ಯವೂ ಇರಬಹುದು.



ಬಾವಲಿಗಳು ತಲೆಕೆಳಗಾಗಿ ನೇತಾಡುವು ದರಿಂದ ಕೆಲವು ಶಾರೀರಿಕ ಪ್ರಯೋಜನಗಳಿವೆ. ಅವುಗಳ ರಕ್ತಪರಿಚಲನಾ ವ್ಯವಸ್ಥೆಯನ್ನು ಸುಸ್ಥಿತಿಯಲ್ಲಿಡಲು ಇದು ಸಹಕಾರಿ. ಇದರಿಂದ ಅವುಗಳ ತಲೆ ಮತ್ತು ಇನ್ನಿತರೇ ಅಂಗಗಳಿಗೆ ಸರಿಯಾದ ಪ್ರಮಾಣದಲ್ಲಿ ರಕ್ತದ ಹರಿವನ್ನು ನಿರ್ವಹಿಸಲು ಸಹಾಯ ಮಾಡುತ್ತದೆ. ಅಲ್ಲದೇ ಬಾವಲಿಗಳು ತಲೆಕೆಳಗಾಗಿರುವುದು ಅವುಗಳ ಜೀರ್ಣಾಂಗ ವ್ಯವಸ್ಥೆಯು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ. ಏಕೆಂದರೆ ಗುರುತ್ವಾಕರ್ಷಣೆಯು ಅವುಗಳ ಜೀರ್ಣಾಂಗಗಳ ಮೂಲಕ ಆಹಾರದ ಚಲನೆಗೆ ಸಹಾಯ ಮಾಡುತ್ತದೆ.

ಬಾವಲಿಗಳು ತಲೆಕೆಳಗಾಗಿ ನೇತಾಡುವುದುರಿಂದ, ಅವು ನೇತಾಡುವ ಸ್ಥಾನದಿಂದ ಸುಲಭವಾಗಿ ಹಾರಾಟದ ಸ್ಥಿತಿಗೆ ಬದಲಾಗುತ್ತವೆ. ತಲೆಕೆಳಗಾಗಿ ನೇತಾಡುವ ಮೂಲಕ ಬಾವಲಿಗಳು ತಮ್ಮ ರೆಕ್ಕೆಗಳನ್ನು ಸುಲಭವಾಗಿ ಹರಡಬಹುದು ಮತ್ತು ಹೆಚ್ಚು ವೇಗವಾಗಿ, ಪರಿಣಾಮಕಾರಿಯಾಗಿ ಮೇಲೇರುತ್ತವೆ.

ಬಾವಲಿಗಳು ತಲೆಕೆಳಗಾಗಿ ನೇತಾಡುವುದದರಿಂದ ಪರಭಕ್ಷಕಗಳಿಂದ ಸುಲಭವಾಗಿ ತಪ್ಪಿಸಿಕೊಳ್ಳುತ್ತವೆ. ಅನೇಕ ಪರಭಕ್ಷಕಗಳು ನೆಲ ಆಧಾರಿತವಾಗಿವೆ. ಆದ್ದರಿಂದ ಬಾವಲಿಗಳು ರಕ್ಷಣೆಗಾಗಿ ಮರಗಳು ಅಥವಾ ಗುಹೆಗಳಲ್ಲಿ ಎತ್ತರಕ್ಕೆ ನೇತಾಡುವ ಮೂಲಕ ಸುರಕ್ಷಿತವಾಗಿರುತ್ತವೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಪ್ರಾಕೃತಿಕ ಜೀವನಶೈಲಿ



ಪ್ರಸ್ತುತ ನಾವು ಬದುಕುತ್ತಿರುವ ಸಮಾಜದಲ್ಲಿ ರಕ್ತದೊತ್ತಡ ಮಧುಮೇಹ ಥೈರಾಯಿಡ್ ಅಜೀರ್ಣ ಸಂಬಂಧಿ ಕಾಯಿಲೆಗಳು ಆಮ್ಲ ಪಿತ್ತ, ಹಾರ್ಮೋನುಗಳ ಅಸಮತೋಲನದಿಂದ ಆಗುವ ತೊಂದರೆಗಳಾದ ಥೈರಾಯಿಡ್, ಪಿಸಿಓಡಿಮುಂತಾದತೊಂದರೆಗಳಿಂದಜನರುಬಳಲುತ್ತಿರುವುದನ್ನು ಕಾಣುತ್ತೇವೆ.

ಪ್ರಸ್ತುತ ದಿನಮಾನಗಳಲ್ಲಿ ಇವೆಲ್ಲವೂ ಸಾಮಾನ್ಯ ಕಾಯಿಲೆಗಳು ಎಂದು ಬಿಂಬಿತವಾಗಿರುವುದನ್ನು ಕೂಡ ನಾವು ಕಾಣುತ್ತಿದ್ದೇವೆ. ನಾವು ನಡೆಸುತ್ತಿರುವ ಜೀವನ ಶೈಲಿ ನಮ್ಮ ಈ ತೊಂದರೆಗಳಿಗೆ ಕಾರಣ ಎಂಬುದು ಬಹುತೇಕರವಾದ ಪರಿಣಾಮವಾಗಿ ಜೀವಮಾನಪೂರ್ತಿ ನಾವು ಔಷಧಿ ಗುಳಿಗೆಗಳ ಮೇಲೆ ಅವಲಂಬಿತರಾಗುತ್ತೇವೆ. ಆದರೆ ಈ ರೀತಿ ಔಷಧಿ ಗುಳಿಗೆಗಳ ಮೇಲೆ ಜೀವನವನ್ನು ನಡೆಸುವುದು ತಪ್ಪು ನಿರ್ಧಾರ ಎಂಬುದು ಜೀವನದ ಯಾವುದೋ ಒಂದು ಘಳಿಗೆಯಲ್ಲಿ ಮನುಷ್ಯನಿಗೆ ಅರಿವಾಗುವ ಹೊತ್ತಿಗೆ ಕಾಲ ಮೀರಿ ಹೋಗಿರುತ್ತದೆ.

ಯಾಕೆ ಹೀಗಾಗುತ್ತಿದೆ?? ಎಂಬುದು ಮಿಲಿಯನ್ ಡಾಲರ್ಗಳ ಪ್ರಶ್ನೆ. ಯಾಕೆ ಈ ಆರೋಗ್ಯ ತೊಂದರೆಗಳ ಹಿಂದೆ ಭಾವನಾತ್ಮಕ ಆರೋಗ್ಯದ ಸಮಸ್ಯೆಯನ್ನು ಯಾರೂ ಗುರುತಿಸುತ್ತಿಲ್ಲ. ದೈಹಿಕ ಆರೋಗ್ಯ ಕೆಟ್ಟರೆ ಫಿಜಿಷಿಯನ್ಗಳ ಬಳಿಗೆ ತೆರಳುವ ನಾವು ಮಾನಸಿಕ ಆರೋಗ್ಯದ ಕುರಿತು ಯೋಚಿಸುವುದೇ ಇಲ್ಲ. ಮಾನಸಿಕ ವೈದ್ಯರ ಬಳಿ ಹೋಗುವುದರ ಕುರಿತು ಮಾತನಾಡಿದರೆ ನನಗೇನು ಹುಚ್ಚೇ!? ಎಂಬ ಪ್ರಶ್ನೆಗಳು ಎದುರಾಗುತ್ತವೆ. ಮಾನಸಿಕ ಆರೋಗ್ಯದ ಕುರಿತು ನಮ್ಮಲ್ಲಿ ಇನ್ನೂ ಕೂಡ ಜಾಗೃತಿ ಮೂಡಿಲ್ಲ. ನಮ್ಮ ಬಹುತೇಕ ಆರೋಗ್ಯ ಸಂಬಂಧಿ ಸಮಸ್ಯೆಗಳಿಗೆ ದೈಹಿಕ ಆರೋಗ್ಯದಷ್ಟೇ ಮಾನಸಿಕ ಆರೋಗ್ಯವೂ ಕೂಡ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದರ ಅರಿವು ನಮಗಿಲ್ಲ.

ಭಾವನಾತ್ಮಕ ಆರೋಗ್ಯದ ಕುರಿತು ನಾವು ಕಾಳಜಿ ವಹಿಸಿದರೆ ನಮ್ಮ ದೈನಂದಿನ ಜೀವನದ ಭಾಗವಾಗಿರುವ ಕಾಯಿಲೆಗಳನ್ನು ನಮ್ಮ ಬದುಕಿನಿಂದ ಹೊರಹಾಕಬಹುದು. ಪರಿಣಾಮವಾಗಿ ನಮ್ಮ ಉಳಿದೆಲ್ಲ ಬದುಕನ್ನು ಸ್ವಸ್ಥ ತನು, ಮನಗಳ ಸಾಂಗತ್ಯದಲ್ಲಿ ಕಳೆಯಬಹುದು.

ಕಳೆದ ಹಲವಾರು ವರ್ಷಗಳಿಂದ ಯೋಗಾಸನವನ್ನು ಮಾಡುತ್ತಿದ್ದ ವ್ಯಕ್ತಿಯೊಬ್ಬರ ದೈಹಿಕ ಆರೋಗ್ಯ ಸುಸ್ಥಿರವಾಗಿದ್ದರೂ ಕೂಡ ವಯೋ ಸಹಜವಾಗಿ ರಕ್ತದೊತ್ತಡ ಕಾಡಿತು. ಪ್ರತಿ ಬಾರಿ ವೈದ್ಯರ ಬಳಿ ಹೋದಾಗಲೂ ರಕ್ತದೊತ್ತಡದ ವೈಪರೀತ್ಯಗಳು ಅವರ ದೇಹಕ್ಕಿಂತ ಹೆಚ್ಚಾಗಿ ಅವರ ಮನಸ್ಸನ್ನು ಹಿಂಡಿ ಹಿಪ್ಪೆ ಮಾಡಿದ್ದವು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ನನ್ನ ಅಪ್ಪ ಅಮ್ಮನಿಗೂ ರಕ್ತದೊತ್ತಡ ಇತ್ತು ಈಗ ನನಗೂ ರಕ್ತದೊತ್ತಡ ವಂಶ ಪಾರಂಪರ್ಯವಾಗಿ ಬಂದಿದೆ ಎಂದು ತುಸು ಹೆಚ್ಚೇ ಆರೋಗ್ಯದ ಕಾಳಜಿಯನ್ನು ಮಾಡಿಕೊಳ್ಳುತ್ತಿದ್ದ ಆ ವ್ಯಕ್ತಿ ಕರೋನಾ ಲಾಕ್ಡೌನ್ ನ ಸಮಯದಲ್ಲಿ ಯೋಗ ವ್ಯಾಯಾಮ, ವಾಕಿಂಗ್‌ನ ಜೊತೆಗೆ ಪ್ರತಿದಿನ ಧ್ಯಾನಕ್ಕೆ ತೊಡಗಿದರು. ಕೆಲವೇ ದಿನಗಳಲ್ಲಿ ಧ್ಯಾನದ ಪರಿಣಾಮವಾಗಿ ಅವರ ಮಾನಸಿಕ ಸಂತುಲನ ದಿಂದಾಗಿ ಅವರ ರಕ್ತದೊತ್ತಡ ಕಡಿಮೆ ಯಾಯಿತು.ಮುಂದಿನ ಕೆಲವೇ ದಿನಗಳಲ್ಲಿ ಅವರುತಮ್ಮ ರಕ್ತದೊತ್ತಡಕ್ಕೆ ಕಾರಣವಾಗುವ ಆಹಾರ, ಒತ್ತಡ, ಉದ್ವೇಗಗಳ ಮೇಲೆ ನಿಯಂತ್ರಣವನ್ನು ಹೊಂದಿ ಇದೀಗ ಮಾತ್ರೆಗಳಿಲ್ಲದೆ ರಕ್ತದೊತ್ತಡವನ್ನು ನಿರ್ವಹಿಸುತ್ತಿದ್ದಾರೆ.

ಮತ್ತೊಬ್ಬ ಹದಿಹರೆಯದ ಯುವಕ ವಯೋ ಸಹಜವಾಗಿ ಬೇಕರಿ ತಿಂಡಿಗಳತ್ತ ಆಕರ್ಷಿತನಾಗಿದ್ದು ತತ್ಪರಿಣಾಮದ ಬೊಜ್ಜು, ಆಲಸ್ಯಗಳು ಆತನಲ್ಲಿ ರಕ್ತದೊತ್ತಡ ಮತ್ತು ಮಧುಮೇಹವನ್ನು ಉಂಟುಮಾಡಿದ್ದವು. ಅನಾರೋಗ್ಯಕರ, ವ್ಯಾಯಾಮರಹಿತ ಜೀವನ ಶೈಲಿ, ಮೊಬೈಲ್ ಸ್ಕ್ರೀನ್ ಜಾಲಾಡುತ್ತಾ ಸಮಯ ಕಳೆಯುವಿಕೆ, ತಡ ರಾತ್ರಿ ಸಮಯದಲ್ಲಿ ಊಟ ಮತ್ತು ನಿದ್ರೆ ಕೆಲವೇ ವರ್ಷಗಳಲ್ಲಿ ಜೀರ್ಣ ಸಂಬಂಧಿ ತೊಂದರೆಗಳಿಗೆ ಒಳಗಾದ ಯುವಕ ಸೂಕ್ತ ಸಮಯದಲ್ಲಿ ಎಚ್ಚೆತ್ತುಕೊಂಡನಲ್ಲದೇ ಯೋಗ, ಪ್ರಾಣಾಯಾಮ, ವೇಗದ ನಡಿಗೆ ಮತ್ತು ಜಾಗಿಂಗಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ತೂಕದಲ್ಲಿ ನಿಯಂತ್ರಣ ತಂದುಕೊಳ್ಳುತ್ತಲೇ ಆತನ ಎಲ್ಲ ಜೀರ್ಣ ಸಂಬಂಧಿ ತೊಂದರೆಗಳು ಹೇಳ ಹೆಸರಿಲ್ಲದೆ ಹೊರಟುಹೋಗಿದ್ದವು.... ಮುಂದಿನ ಕೆಲವೇ ದಿನಗಳಲ್ಲಿ ಆತನಿಗೆ ಕಾಣಿಸಿಕೊಂಡ ರಕ್ತದೊತ್ತಡ ಮತ್ತು ಮಧುಮೇಹಗಳು ಕೂಡ ಓಡಿ ಹೋಗಿದ್ದವು.

ತಮ್ಮ ದೈನಂದಿನ ಜೀವನದಲ್ಲಿ 9 ಗಂಟೆಗಳ ನಿದ್ರೆ 8 ಗಂಟೆಗಳ ಕಾಲ ಕೆಲಸ 7 ಗ್ಲಾಸ್ ನೀರು ಸೇವನೆ 3 ಹೊತ್ತು ಸರಿಯಾದ ಸಮಯದಲ್ಲಿ ನಿಗದಿತ ಪ್ರಮಾಣದ ಊಟ ತಿಂಡಿಗಳನ್ನು ಸೇವಿಸುವುದು 2ಕ್ಕಿಂತ ಹೆಚ್ಚು ಹಣ್ಣುಗಳು ಪ್ರತಿದಿನದ ಆಹಾರದ ಒಂದು ಭಾಗವಾಗಿರುವುದು ಹಸಿ ತರಕಾರಿಗಳ ಸೇವನೆ ಇವುಗಳ ಜೊತೆಗೆ ಪ್ರತಿದಿನ ವ್ಯಾಯಾಮ, ವಾಕಿಂಗ್ ನಂತಹ ಉತ್ತಮ ಹವ್ಯಾಸಗಳು ಬ್ಯಾಡ್ಮಿಂಟನ್ ವಾಲಿಬಾಲ್ ಟೆಲಿಕಾಯ್ಟ್ ನಂತಹ ಆಟಗಳು, ಪ್ರಕೃತಿಯೊಂದಿಗೆ ನ ಒಡನಾಟ ಕೆಲವೇ ನಿಮಿಷಗಳಲ್ಲಿ ಕ್ರಮಿಸಬಹುದಾದ ದೂರವನ್ನು ಕೂಡ ದ್ವಿಚಕ್ರ ವಾಹನಗಳಲ್ಲಿ ಓಡಾಡುವುದರ ಬದಲು ಕಾಲ್ನಡಿಗೆ ಇಲ್ಲವೇ ಸೈಕಲ್ ಬಳಸುವುದು.

ಮನೆಯಲ್ಲಿ ಒಂದು ಪುಟ್ಟ ಉದ್ಯಾನವನ್ನು ಬಂದಿದ್ದು ಸಾಧ್ಯವಾದಷ್ಟು ಗಿಡಗಳ ಆರೈಕೆ ಮಾಡುವುದು ಇಲ್ಲವೇ ಸಾರ್ವಜನಿಕ ಉದ್ಯಾನ ಇಲ್ಲವೇ ಪ್ರಕೃತಿಯ ಮಡಿಲಾದ ಹೊಲಗದ್ದೆಗಳಲ್ಲಿ ತುಸು ಹೊತ್ತು ಸಮಯ ಕಳೆಯುವುದು.

ಧ್ಯಾನ ಮಾಡುವುದು... ಆರಂಭದಲ್ಲಿ ಸುಮ್ಮನೆ ಕಣ್ಣು ಮುಚ್ಚಿ ಕುಳಿತುಕೊಳ್ಳುವುದು ಸಾಧ್ಯವಾಗದೆ ಹೋದರೂ ನಿಧಾನವಾಗಿ ಈ ಅಭ್ಯಾಸವನ್ನು ರೂಢಿಸಿಕೊಂಡರೆ ಆಳವಾದ ಧ್ಯಾನವನ್ನು ಮಾಡುವ ಮೂಲಕ ಮನಸ್ಸನ್ನು ಪ್ರಶಾಂತವಾಗಿ ಇಟ್ಟುಕೊಳ್ಳುವುದು. ಇದು ನಮ್ಮ ಮೆದುಳಿನ ಮೇಲೆ ಹೆಚ್ಚಿನ ಪರಿಣಾಮ ಬೀರುವ ಮೂಲಕ ನರಗಳ ಉದ್ವೇಗವನ್ನು ಶಮನಗೊಳಿಸಿ ತನ್ಮೂಲಕ ರಕ್ತದೊತ್ತಡವನ್ನು ಕಡಿಮೆಗೊಳಿಸುತ್ತದೆ.

ಇದೆಲ್ಲಕ್ಕಿಂತಲೂ ಮಿಗಿಲಾಗಿ.... ಬಸವಾದಿ ಪ್ರಮಥರು ಹೇಳಿರುವಂತೆ "ಬಾರದು ಬಪ್ಪದು, ಬಪ್ಪದು ತಪ್ಪದು " ದಾಸರು ಹೇಳಿರುವ "ಬಂದದ್ದೆಲ್ಲ ಬರಲಿ,ಗೋವಿಂದನ ದಯೆಯೊಂದಿರಲಿ" ಎಂಬಂತೆ ಬದುಕಿನಲ್ಲಿ ಬರುವ ಎಲ್ಲ ಸವಾಲುಗಳನ್ನು ಸ್ವೀಕರಿಸಿ ಜೀವಿಸೋಣ. ಇದು ಮನಸ್ಸಿನ ನಿರಾಳತೆಗೆ ಕಾರಣವಾಗುತ್ತದೆ.

# ಜೀವನದ ಸಾರ್ಥಕತೆಗೆ ಬೇಕು ಉತ್ತಮ ಆಲೋಚನೆ...

ಎಂಭತ್ನಾಲ್ಕು ಲಕ್ಷ ಜೀವರಾಶಿಗಳ್ಳಲ್ಲಿ ಮನುಷ್ಯ ಜನ್ಮವೊಂದು ಅಮೂಲ್ಯವಾದ ವಸ್ತು. ಇದನ್ನರಿತರೆ ಸದ್ಗತಿ. ಅರಿಯದಿದ್ದರೆ ಅಧೋಗತಿ. ಬೆಲೆ ಬಾಳುವ ತಿಜೋರಿಯಲ್ಲಿ ಬೆಳ್ಳಿ-ಬಂಗಾರ, ಮುತ್ತು-ರತ್ನದಂತಹ ವಸ್ತು ವೈಢೂರ್ಯಗಳನ್ನಿಟ್ಟು ಬೀಗ ಹಾಕುತ್ತೇವೆಯೇ ವಿನಃ ಚಿಂದಿಬಟ್ಟೆ, ಕಸಬರಿಗೆ ಇಟ್ಟರೆ ಹೇಗಾಗುತ್ತದೆ? ಹಾಗೆಯೇ ಲೋಕದ ಉತ್ತಮ ಜ್ಞಾನ ತಿಳಿಯಲು ಮಾನವ ದೇಹವೇ ಬೇಕೇ ಹೊರತು ದುರ್ವ್ಯಸನ-ದುರ್ಗುಣಗಳನ್ನು ತುಂಬಿದರೆ ಬೆಲೆ ಬರಲಾರದು. ವಿಚಾರ ಪ್ರವೃತ್ತಿಯಲ್ಲಿ ಇತರೇ ಪ್ರಾಣಿಗಳಿಗಿಂತ ಭಿನ್ನವಾಗಿರುವ ಮನುಷ್ಯ ತನ್ನ ಸಾಧನೆ-ಬೋಧನೆ-ಅನುಕರಣೆಯಲ್ಲಿ ನಿಪುಣ.

ಮನುಷ್ಯನಲ್ಲಿ ಗುಣಗಳಿರುವಂತೆಯೇ ದೋಷಗಳಿರುವುದು ಸಹಜ. ಹಂಸಕ್ಷೀರ ನ್ಯಾಯದಂತೆ ಮತ್ತೊಬ್ಬರನ್ನು ನೋಡುವಾಗ ದೋಷಗಳನ್ನು ಬದಿಗೊತ್ತಿ ಗುಣಗಳನ್ನು ಗ್ರಹಿಸುವ ಸದ್ಗುಣ ನಮ್ಮಲ್ಲಿರಬೇಕು. ಅವರವರ ಸಿಟ್ಟು ಶೃಂಗಾರಕ್ಕೆ ಬಾರದು, ಉಪ್ಪು ತಿಂದರೆ ನೀರು ಕುಡಿಯಲೇಬೇಕು ಅದನ್ನು ಕಟ್ಟಿಕೊಂಡು ನಮಗೇನಾಗಬೇಕಾಗಿದೆ? ದೃಷ್ಟಿಯಂತೆ ಸೃಷ್ಟಿ ಮನದಲ್ಲಿ ಏನು ಭಾವಿಸುತ್ತೇವೆಯೋ ಅವುಗಳೇ ನೆರವೇರುವುದು. ನಮ್ಮ ವೃತ್ತಿ-ಪ್ರವೃತ್ತಿಯಲ್ಲಿ ನಿರೀಕ್ಷೆ-ಅಪೇಕ್ಷೆಗಳಲ್ಲಿ ನೈತಿಕತೆ-ತಾತ್ವಿಕತೆಯ ನಿಲುವು ತುಂಬಿರಬೇಕು.



ಡಾ. ರಾಜಶೇಖರ ಜಮದಂಡಿ,
ಲೇಖಕರು ಮೊ: 9448441471

Hampi Times E-paper
SCAN AND READ

ಬೆಲೆ ಕಟ್ಟಲಾರದಷ್ಟು ಅಮೂಲ್ಯವಾಗಿರುವ ಮನುಷ್ಯ ಜೀವನವನ್ನು ಸರ್ವಾಂಗ ಸುಂದರಮಯಗೊಳಿಸಿಕೊಳ್ಳುವುದಕ್ಕೆ ಸದ್ವಿದ್ಯೆ, ಸದ್ಬುದ್ಧಿ, ಸಚ್ಚಾರಿತ್ರ್ಯ, ಸಂಯಮ, ಸರಳತೆ, ಸಂಬಂಧಗಳು ಬೇಕು. ಇವುಗಳು ಚೆನ್ನಾಗಿದ್ದಾಗ ಮನದಲ್ಲಿ ಸಂತೋಷದ ತರಂಗಗಳು ಅಲೆ ಅಲೆಯಾಗಿ ಬರುತ್ತಿರುತ್ತವೆ. ನಾಗಾಲೋಟದಲ್ಲಿರುವ ಯುವಜನಾಂಗಕ್ಕೆ ಸಾಹಿತ್ಯ, ಸಂಸ್ಕೃತಿ, ಸಂಗೀತ, ಆಧ್ಯಾತ್ಮ ಅತ್ಯಗತ್ಯ. ಅದಕ್ಕಾಗಿ ಭರತ ಭೂಮಿಯೊಂದು ಹಲವಾರು ಸಂತರ, ಶರಣರ, ತತ್ವಪದಕಾರರ, ದಾಸರ ನೆಲೆವೀಡು. ಅವರ ಸದ್ವಿಚಾರ, ಆದರ್ಶ-ಮೌಲ್ಯಗಳೇ ಧರ್ಮದಿಂದ ನಡೆಯುವುದಕ್ಕೆ ದಾರಿದೀಪಗಳಾಗಿವೆ. ಯಾವುದೇ ತೊಡಕುಗಳು ಎದುರಾದರೂ ಮಹಾತ್ಮರ ಬದುಕು ಉತ್ತರಿಸಬಲ್ಲುದು.

ಇಂದಿನ ಭೌತಿಕ ಬದುಕು ಶ್ರೀಮಂತವಾಗಿದ್ದರೂ ಆಂತರಿಕ ಬದುಕು ಮಾತ್ರ ದುರ್ಬಲವಾಗಿದೆ. ಕೇವಲ ಸಿರಿಸಂಪದ, ವಿದ್ಯೆ, ಬುದ್ಧಿ, ಅಧಿಕಾರ, ಕೀರ್ತಿ, ಸ್ಥಾನಮಾನ ಗಳಿಸಿರುವುದರಿಂದ ಬದುಕು ಸಮೃದ್ಧಗೊಳ್ಳುವುದಿಲ್ಲ. ಇದರೊಂದಿಗೆ ಮಾನವೀಯ ಮೌಲ್ಯಗಳನ್ನು ಗಳಿಸಿ ಬೆಳೆಸಿಕೊಂಡಾಗ ಜೀವನ ಸಾರ್ಥಕಗೊಳ್ಳುವುದು.



# ತುಂಗಭದ್ರಾ ಡ್ಯಾಂ ಭರ್ತಿಯಾದರೂ ಉದ್ಯಾನವನದಲ್ಲಿ ನೀರಿಗೆ ಬರ!

### ನಿರೀಕ್ಷೆಗಳಿಟ್ಟುಕೊಂಡ ಬಂದ ಪ್ರವಾಸಿಗರಿಗೆ ನಿರಾಸೆ | ಡ್ಯಾಂ ವೀಕ್ಷಿಸಲು ಬಂದವರಿಗಿಲ್ಲ ಮೂಲಭೂತ ಸೌಲಭ್ಯ | ಭೀತಿಯಲ್ಲೆ ಸಂಚಾರ

ಆನಂದವನ, ನಂದನವನ. ಆಹಾ!! ಎಷ್ಟು ಚೆಂದದ ಹೆಸರುಗಳು. ಈ ಎಲ್ಲಾ ವನಗಳಿರುವುದು, ನಮ್ಮ ಹೆಮ್ಮೆಯ ತುಂಗಭದ್ರ ಜಲಾಶಯದ ಉದ್ಯಾನವನದಲ್ಲಿ ಮೊದಲೆಲ್ಲಾ ಡ್ಯಾಮ್ ನೋಡುವಾಗ, ಆಹ್ಲಾದಕರ ಪ್ರಕೃತಿ ನೋಟದೊಂದಿಗೆ, ಮನ ಪ್ರಫುಲ್ಲಗೊಳ್ಳುತ್ತಿತ್ತು. ಗಿಡ–ಮರಗಳು ಕಳೆಯಾಗಿ ಕಂಗೊಳಿಸುತ್ತಿದ್ದವು. ಬಂಧಿಯಾಗಿದ್ದರೂ ಮೊಲ–ಜಿಂಕೆಗಳ ಓಡಾಟದಿ ನೋಟದಿಂದ ಜೀವಕಳೆ ತುಂಬಿತ್ತು. ಮಳೆಗಾಲದಲ್ಲಂತೂ ತುಂಗಭದ್ರೆಯ ಡ್ಯಾಮ್ ಅವರಣದಲ್ಲಿ, ಜಿನುಗುವ ತುಂತುರು ನಡುವೆ, ಆಗಾಗದುತ್ತನೇ ಸುರಿದೇ ಬಿಡುವ ಮಳೆಯೊಂದಿಗೆ, ಅಲೆ ಅಲೆಯಾಗಿ ಬಂದು, ತುಂಬಿ ತುಳುಕುವ ಜೀವದಾಯಿನಿ ತುಂಗಭದ್ರೆಯನ್ನು ಕಣ್ತುಂಬ ನೋಡುತ್ತಿದ್ದರೆ, ಸಾರ್ಥಕ ಭಾವ ಮಾಡುತ್ತಿದ್ದುದು ಅತಿಶಯವಲ್ಲ.

ಆದರೆ ಮೊನ್ನೆಯಷ್ಟೇ ಭೇಟಿ ನೀಡಿದಾಗ, ತುಂಬಿದ ತುಂಗಭದ್ರಾ ಜಲಾಶಯ ಖುಷಿ ನೀಡಿದರೂ ಸಹ, ಅನಿರೀಕ್ಷಿತ ನೀರಸ ಭಾವವನ್ನೆ ನೀಡಿತು. ಕಾರಣ ಎಲ್ಲೆಂದರಲ್ಲಿ ಅಧಿಕ ಕಸ, ಪೇಪರ್, ಪ್ಲಾಸ್ಟಿಕ್ ಬಾಟಲಿಗಳು ಕಣ್ಣಿಗೆ ರಾಚುತ್ತಿದ್ದವು. ಅಷ್ಟು ನೀರಿದ್ದರೂ ಕಾರಂಜಿಗಳೆಲ್ಲಾ ಬಂದಾಗಿದುವು, ಹಲವು ಗಿಡ–ಮರಗಳು ಬಾಡಿದ್ದವು, ಕೆಲವು ಗಿಡದ ಭಾಗ ಕೆಲವೆಡೆ ಒಣಗಿದ್ದು ನೋಡಿ ನಿಜಕ್ಕೂ ಬೇಸರ ಎನಿಸಿತು. ಜೊತೆಗೆ ಡ್ಯಾಮ್ ನ ವೀವ್ ಪಾಯಿಂಟ್ ನಿಂದ, ಉದ್ಯಾನವನಕ್ಕೆ ಇಳಿದು ಬರಲಿದ್ದ, ಮೆಟ್ಟಿಲು ಪಕ್ಕದ ಕಂಬಿಗಳು ಕಿತ್ತುಹೋಗಿದ್ದವು, ಕೆಲವು ಆಗಲೋ ಈಗಲೋ ಬೀಳುವಂತೆ ಅಲ್ಲಾಡುತ್ತಿದ್ದವು. ಹಿರಿಯರು ಕಂಬಿ ಹಿಡಿದು ಇಳಿಯಲು ನಿಜಕ್ಕೂ ಭಯ ಪಡುತ್ತಿದ್ದರು. ವಿದ್ಯುತ್ ಇಲ್ಲದ ಶೌಚಾಲಯಗಳ ಆವಸ್ಥೆಯೇ ಬೇಡ. ಬೆಟ್ಟದ ಮೇಲಿನ ವೈಕುಂಠ View point ಗೆ ಹೋಗಲು ಸಹ, ಸಫಾರಿ ಬಸ್‌ಗಳು ಸಹ ಇರಲಿಲ್ಲ. ಅಲ್ಲಿನ ಸಿಬ್ಬಂದಿಯನ್ನು ಕೇಳಿದರೆ, "ಇಲ್ಲಾ ಕಾಂಟ್ರ್ಯಾಕ್ಟ್ ಮುಗಿದಿದೆ, ಹಾಗಾಗಿ ಈಗ ಸಫಾರಿ ಬಸ್‌ಗಳಿಲ್ಲ, ನೀವೇ ನಡೆದು ಹೋಗುವುದಾದರೆ ಹೋಗ್ಬನ್ನಿ" ಎಂದರು. ಮಳೆಗಾಲದಲ್ಲೇ ಹೀಗಾಗಬೇಕೇ ಎನಿಸಿತು. ಅಲ್ಲಿ 'ಚಿರತೆ, ಹಾವು, ಕರಡಿಗಳಿವೆ. ಪಾದಚಾರಿಗಳು ಹೋಗುವಂತಿಲ್ಲ', ಎನ್ನುವ ಬೋರ್ಡ್ ನೋಡಿಯೂ ನಡೆದೇ ಹೋಗಲು ಧೈರ್ಯ ಬರುವುದೇ!? 'ಸರಿ ಇನ್ನೇನು' ಎಂದು ಪ್ರಾಣಿಗಳನ್ನು ನೋಡಲು ಹೋದರೆ, ನವಿಲುಗಳ ಕೂಗು ಕೇಳುವುದು ಬಿಟ್ಟರೆ, ಮೊಲ–ಜಿಂಕೆಗಳು ಇರದೇ, ಅವುಗಳ ಕೊಟ್ಟಿಗೆ ಖಾಲಿಯಾಗಿದ್ದವು. ಎಲ್ಲಿಯೂ ಸಿಬ್ಬಂದ್ಧಿ, ಸೆಕ್ಯೂರಿಟಿ ಅಂತೂ ಇರಲಿಲ್ಲ, ಅಲ್ಲಿದ್ದ ಸ್ವಚ್ಛತಾ ಕೆಲಸಗಾರರನ್ನು ಕೇಳಿದಾಗ, "ಮೊಲ–ಜಿಂಕೆ ಯಾವುದೂ ಈಗ ಇಲ್ಲ"ಎಂದರು.

ಪ್ರವಾಸಿಗರು ಮಳೆಗಾಲದಲ್ಲಿ ಹೆಚ್ಚಾಗಿಯೇ ತುಂಗಭದ್ರಾ ಡ್ಯಾಮ್‌ಗೆ ಭೇಟಿ ನೀಡುವುದು ತುಂಗಭದ್ರೆಯನ್ನು ಕಣ್ತುಂಬಿಕೊಳ್ಳಲು. ಜೊತೆಗೆ ತಮ್ಮ ದೈನಂದಿನ ಜಂಜಾಟಗಳನ್ನು ಬದಿಗೊತ್ತಿ, ಪ್ರಕೃತಿ ನಡುವೆ ಕಾಲಕಳೆದು, ಮಕ್ಕಳಿಗೆ ಸಾಧು ಪ್ರಾಣಿ ತೋರಿಸಿ ಸಂತಸ ಪಡುವುದು ರೂಢಿ. ಆಡಳಿತ ವ್ಯವಸ್ಥೆಯನ್ನು ಅಲ್ಲಗಳೆಯುವುದು ಇದರ ಉದ್ದೇಶವಲ್ಲ. ನಿರಾಸೆ ಮೂಡಬಾರದೆಂಬ ಉದ್ದೇಶವಷ್ಟೇ. ಹಂಪಿಗೆ ಬರುವವರು, ಕುಟುಂಬದ ಜೊತೆ ದಿನಪೂರ್ತಿ ಸಮಯ ಕಳೆಯಲು, ಬಹುನಿರೀಕ್ಷೆ ಇರಿಸಿಕೊಂಡೇ ಟಿ.ಬಿ.ಡ್ಯಾಮ್‌ಗೆ ಬರುವುದು ಸಹಜ. ಅದರಲ್ಲೂ ಮಳೆಗಾಲದಲ್ಲಿ ತುಂಬಿದ ಜಲಾಶಯಗಳು ಎಲ್ಲರನ್ನು ಕೈಬೀಸಿ ಕರೆಯುತ್ತವೆ. ಆದರೆ ಕೆಲವು ಮೂಲ ಸೌಕರ್ಯಗಳು, ಇನ್ನಿತರೇ ನಿರ್ವಹಣೆ ಇಲ್ಲವಾದರೆ, ನಿರೀಕ್ಷೆ ಇರಿಸಿಕೊಂಡು ಬಂದ ಪ್ರವಾಸಿಗರಿಗೆ ನಿರಾಸೆಯಾಗುವುದಲ್ಲವೇ!? ಹಾಗಾಗಿಯೇ ಹೆಮ್ಮೆಯ ತುಂಗಭದ್ರ ಜಲಾಶಯದ ಉದ್ಯಾನವನವು ಮತ್ತೆ, ಮೊದಲಿನಂತೆ ಸುಸ್ಥಿತಿಯ ನಿರ್ವಹಣೆ ಕಾಣಲಿ ಎಂಬುದೇ ಸದಾಶಯ.



ಲೀಲಾವತಿ ಶಿವನಗೌಡ್ರು,
ಅಂಕಸಮುದ್ರ, ಹ.ಬೊ.ಹಳ್ಳಿ


Hampi Times E-paper
SCAN AND READ





# ಕವಿ ಮನಸು

## ಆಷಾಡ



ಹರೆಯವದು ಬಂದಿತ್ತು
ಹಯದಂತೆ ಮನ ಕುಣಿದಿತ್ತು
ನಮ್ಮಿಬ್ಬರ ಹೃದಯ ಬಂಧನ
ಕರಿಮಣಿಯೊಳಗೆ ಬಂಧಿಸಿತ್ತು

ನವ ದಂಪತಿಗಳು ನಾವಾಗಿ
ನವ ಕನಸುಗಳ ಸೊತ್ತಾಗಿ
ಇರುವಾಗಲೇ ಆಷಾಡಾಸುರ
ನಮ್ಮಿಬ್ಬರ ಬೇರೆ ಮಾಡೈತೋ

ಆಷಾಢ ಮಾಸದೊಳು
ಅತ್ತೆ ಸೊಸೆ ಒಂದೇ ಬಾಗಿಲೋಳು
ಅಡ್ಡಾಡಬಾರದೆಂಬ ನಿಯಮವಂತೆ
ನಾ ತವರಿನಲ್ಲೇ ಇರಬೇಕಂತೆ


ನಲ್ಲನಿಲ್ಲದ ಇರುಳು ನಲ್ಲೆಗೆ ಉರುಳು
ಕಾದು ಸುಸ್ತಾಗಿವೆ ಅವಳ ಕಂಗಳು
ಪತಿ ಬರುವವರೆಗೆ ಇರಲಿ ಹಗಲು
ಬಂದ ಮೇಲೆ ಆಗಲಿ ಹಗಲೇ ಇರುಳು

ಶ್ರಾವಣದ ಸುಖ ಉಣಲು
ಆಷಾಡದೊಳು ಅಗಲಲೇಬೇಕಂತೆ
ಆಗಲೇ ಪ್ರೀತಿಗೆ ಬೆಲೆ ಬರುವುದಂತೆ
ಕಾತರವು ಇಬ್ಬರಿಗೂ ಮಿಲನಕ್ಕಂತೆ

ಸಂಕಲನ ಮಾಡುವುದ್ಯಾಕ
ವ್ಯವಕಲನ ಮಾಡುವುದ್ಯಾಕ
ಹಸನಾದ ಬಾಳಿಗೆ ಬೇಕು ಲೆಕ್ಕ
ಇರುಳು ಕಳೆದರೆ ತಾನೇ ಹಗಲು ಬೆಳಕ

– ಕೆ ಎಂ ಬಸವರಾಜ ಹೊಸಪೇಟೆ

## ಎಂದು ಬರುವೆ



ಬಾನಿನಿಂದ ಮೇಘವನ್ನು
ಪಡೆದೆಯೇನು ಎರವಲು
ಅದನು ಕೊಂಚ ತಿದ್ದಿ ತೀಡಿ
ಕೇಶವಾಯ್ತೆ ಶಿರದೊಳು

ಗಗನದೆರಡು ತಾರೆ ಕದ್ದೆ
ಇರಿಸೆ ನಿನ್ನ ನಯನಕೆ
ಹೊಳೆವ ಬೊಗಸೆ ಕಣ್ಣುಗಳಿಗೆ
ಏಕೆ ಬೇಕು ಕಾಡಿಗೆ

ಹುಬ್ಬಿಗೆಂದು ಕೈಯಕೊಟ್ಟೆ
ಚೆಲುವ ಮಳೆಯ ಬಿಲ್ಲಿಗೆ
ಇಷ್ಟು ನುಣುಪು ಹೇಗೆ ಬಂತು
ನಿನ್ನ ಗುಳಿಯ ಕೆನ್ನೆಗೆ

ಸಂಜೆ ಬಣ್ಣ ಮೆತ್ತಿಕೊಂಡೆ
ನಗುವ ಚೆಲುವ ಅಧರಕೆ
ಶಶಿಯ ಕಾಂತಿ ಕಸಿದೆಯೇನು
ಹೊಳೆಯುತಿರುವ ತನುವಿಗೆ

ಬೇಕು ಎನಿಸಿದೆಲ್ಲವನ್ನು
ನಿನ್ನ ಸ್ವಂತ ಮಾಡಿದೆ
ಧ್ವನಿಯ ನೀಡಲೆಂದು ಬರುವೆ
ಬಾಳ ಯುಗಳ ಗೀತೆಗೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

ಮಕ್ಕಳ ಜ್ಞಾನ ವಿಕಾಸಕ್ಕೆ
ಮನೆಗೊಂದು ಕನ್ನಡ ದಿನಪತ್ರಿಕೆ ಇರಲಿ

# ಸ್ವ–ಉದ್ಯೋಗಕ್ಕೆ ಸೃಜನಾತ್ಮಕ ಕೌಶಲ ಅಗತ್ಯ: ಪ್ರಮೋದ್.ಪಿ



■ ಹಂಪಿ ಟೈಮ್ಸ್ ಬಳ್ಳಾರಿ

ಸ್ವ–ಉದ್ಯೋಗ ಕೈಗೊಳ್ಳಲು ಸೃಜನಾತ್ಮಕವಾಗಿ ಹೊಸ ವಿಧದ ಕೌಶಲ್ಯ ತರಬೇತಿ ಹೊಂದಬೇಕು ಎಂದು ಜಿಲ್ಲಾ ಪಂಚಾಯತ್‌ನ ಯೋಜನಾಧಿಕಾರಿ ಪ್ರಮೋದ.ಪಿ ಅವರು ಹೇಳಿದರು.

ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯ ಆವರಣದಲ್ಲಿ ಹಮ್ಮಿಕೊಂಡಿದ್ದ 30 ದಿನಗಳ ಬ್ಯೂಟಿ ಪಾರ್ಲರ್ ತರಬೇತಿ ಮತ್ತು 10 ದಿನಗಳ ಕುರಿ ಸಾಕಾಣಿಕೆ ತರಬೇತಿ ಕಾರ್ಯಕ್ರಮವನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತದಲ್ಲಿ ಮಹಿಳೆಯರು ಸೌಂದರ್ಯಕ್ಕೆ ಹೆಚ್ಚು ಒತ್ತು ಕೊಡುವರಿಂದ, ಬ್ಯೂಟಿ ಪಾರ್ಲರ್‌ನಲ್ಲಿ ವಿಧದ ಮೇಕಪ್ ಕೌಶಲ್ಯವನ್ನು ಬೆಳಸಿಕೊಳ್ಳಬೇಕು. ಅದೇರೀತಿಯಾಗಿ ಕುರಿ ಸಾಕಾಣಿಕೆಯು ವ್ಯವಸಾಯದ ಜೊತೆಗೆ ಪೂರಕವಾಗಿದ್ದು, ಕುರಿಗಳಿಗೆ ತುಂಬಾ ಬೇಡಿಕೆ ಇದೆ. ಕುರಿ ಸಾಕಾಣಿಕೆ ತರಬೇತಿಯ ಸದುಪಯೋಗ ಪಡಿಸಿಕೊಳ್ಳಬೇಕು. ಸಮಾಜದಲ್ಲಿ ಉತ್ತಮ ಜೀವನ ನಡೆಸಲು ಇಂತಹ ತರಬೇತಿಗಳು ಸಹಕಾರಿಯಾಗಲಿ ಎಂದು ಅವರು ಹಾರೈಸಿದರು. ಜಿಲ್ಲಾ ಕೈಗಾರಿಕಾ ಕೇಂದ್ರದ ಉಪನಿರ್ದೇಶಕ ಅಜೀತ್ ನಾಯ್ಕ ಅವರು ಮಾತನಾಡಿ, ಮಹಿಳೆಯರು ಮನೆಯಲ್ಲಿ ಕುಳಿತು ಬ್ಯೂಟಿ ಪಾರ್ಲರ್ ಮಾಡುವದರಿಂದ ಕೌಟುಂಬಿಕ ಜೀವನದಲ್ಲಿ ಆರ್ಥಿಕವಾಗಿ ಸಬಲರಾಗಬಹುದು ಎಂದು ತಿಳಿಸಿದರು.

ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕ ರಾಜೇಸಾಬ್.ಎಚ್ ಎರಿಮನಿ ಅವರು ಮಾತನಾಡಿ, ಕೌಶಲ್ಯದ ಜೊತೆಗೆ ಆತ್ಮವಿಶ್ವಾಸ, ವ್ಯಕ್ತಿತ್ವ ವಿಕಸನದ ಮಾಹಿತಿ ನೀಡಲಾಗುತ್ತಿದ್ದು, ತಮ್ಮ ವೃತ್ತಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಜಿಪಂನ ಎನ್‌ಆರ್‌ಎಲ್‌ಎಂ ನ ರಘುವರ್ಮಾ, ತರಬೇತಿ ಕಾರ್ಯಕ್ರಮ ಸಂಯೋಜಕರಾದ ಜಡೆಪ್ಪ, ಸಿದ್ದಲಿಂಗಮ್ಮ, ಸಂತೋಷ ಕುಮಾರ್, ಕಿರಣ ಕುಮಾರ ಸೇರಿದಂತೆ 60 ಜನ ಶಿಬಿರಾರ್ಥಿಗಳು ಭಾಗವಹಿಸಿದ್ದರು.

# ಜು.26ಕ್ಕೆ ವಿಕಲಚೇತನರ ಸಭೆ

■ ಹಂಪಿ ಟೈಮ್ಸ್ ಹೊಸಪೇಟೆ

ವಿಕಲಚೇತನರು ಇಲಾಖಾವಾರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ ಪರಿಹಾರ ದೊರಕಿಸಕೊಬೇಕು ಹಾಗೂ ತ್ರೈಮಾಸಿಕ ಕುಂದು ಕೊರತೆಗಳ ಸಭೆಯನ್ನು ಕರೆಯಬೇಕೆಂದು ಹೊಸಪೇಟೆ ನಗರ ವಿಕಲಚೇತನರ ಸಂಘದ ಅಧ್ಯಕ್ಷರು ಮನವಿ ಸಲ್ಲಿಸಿರುವುದರಿಂದ ವಿಕಚೇತನರ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಜುಲೈ 26ರಂದು ಬೆಳಗ್ಗೆ 11 ಗಂಟೆಗೆ ತಹಶೀಲ್ದಾರ್ ಕಾರ್ಯಾಲಯದ ಸಭಾಂಗಣದಲ್ಲಿ ಸಭೆ ನಡೆಯಲಿದೆ.

ಹೊಸಪೇಟೆ ತಾಲೂಕುಮಟ್ಟದ ಅಧಿಕಾರಿಗಳು ತಮ್ಮ ಇಲಾಖೆಯಿಂದ ವಿಕಲಚೇತನರಿಗೆ ನೀಡಿದ ಸೌಲಭ್ಯಗಳ ವಿವರವಾದ ವರದಿ ಯೊಂದಿಗೆ ಸಭೆಗೆ ಯಾವುದೇ ಪ್ರತಿನಿಧಿ ಗಳನ್ನು ನಿಯೋಜಿಸದೆ ತಾವೇ ಖುದ್ದಾಗಿ ಹಾಜರಾಗಬೇಕು ಎಂದರು.

# ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ: ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಕೊಪ್ಪಳ

2024–25ನೇ ಸಾಲಿನಲ್ಲಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕೊಪ್ಪಳ ವತಿಯಿಂದ ಜಿಲ್ಲೆಯ ಅಲ್ಪಸಂಖ್ಯಾತರ ಸಮುದಾಯದ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ) ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಸಂಸ್ಥೆಯ ಮೂಲಕ 10 ತಿಂಗಳ ವಸತಿ ಸಹಿತ ಐ.ಎ.ಎಸ್/ಕೆ.ಎ.ಎಸ್ ಸ್ಪರ್ಧಾತ್ಮಕ ಪರೀಕ್ಷೆಗಳ ಪರೀಕ್ಷಾ ಪೂರ್ವ ತರಬೇತಿ ನೀಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಸೇವಾಸಿಂಧು ಪೋರ್ಟಲ್ Sevasindhuservices.karnataka.gov.in ಮೂಲಕ ಆನ್‌ಲೈನ್ ಅರ್ಜಿಯನ್ನು ಆಗಸ್ಟ್ 31 ರೊಳಗಾಗಿ ಸಲ್ಲಿಸಬೇಕು. ಕೊನೆಯ ದಿನಾಂಕದ ನಂತರ ಸ್ವೀಕೃತವಾಗುವ ಯಾವುದೇ ಅರ್ಜಿ/ಕೋರಿಕೆಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ.

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅಲ್ಪಸಂಖ್ಯಾತರ ಸಮುದಾಯದ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ)ಕ್ಕೆ ಸೇರಿದ್ದು ರಾಜ್ಯದ ನಿವಾಸಿಯಾಗಿರಬೇಕು. ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಹೊಂದಿರಬೇಕು. ಅಭ್ಯರ್ಥಿಯ ವಯೋಮಿತಿ ಕನಿಷ್ಠ 21 ಹಾಗೂ ಗರಿಷ್ಠ 35 ವರ್ಷಗಳು ಮೀರಿರಬಾರದು. (ಅರ್ಜಿ ಸಲ್ಲಿಸುವ ಅಂತಿಮ ದಿನಾಂಕಕ್ಕೆ). ಕೇಂದ್ರ ಹಾಗೂ ರಾಜ್ಯ ಸರ್ಕಾರದ ನೌಕರಿಯಲ್ಲಿರುವ ಅಭ್ಯರ್ಥಿಗಳು ಅರ್ಹರಿರುವುದಿಲ್ಲ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ.



ಹಂಪಿ ಟೈಮ್ಸ್
HAMPI TIMES

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ಕ್ರೋಧಿ

**26–07–2024 – ಶುಕ್ರವಾರ**

| | |
|---|---|
| ತಿಥಿ | : ಷಷ್ಠಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಉತ್ತರಭಾದ್ರಪದ |
| ಯೋಗ | : ಸುಕರ್ಮ |
| ಕರಣ | : ಗರಜ |
| ಸೂರ್ಯೋದಯ | : 05:56:16 |
| ಸೂರ್ಯಾಸ್ತ | : 19:10:27 |
| ರಾಹು | : 10:54–12:33 |
| ಯಮಘಂಡ | : 15:52–17:31 |
| ಗುಳಿಕ | : 07:36–09:15 |

## ತುಂಗಭದ್ರಾ ನೀರಿನ ಮಟ್ಟ



**ಗುರುವಾರ : 25–07–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.91 ಅಡಿ |
| ಒಳ ಹರಿವು | 75810 ಕ್ಯುಸೆಕ್ |
| ಹೊರ ಹರಿವು | 23469 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.421 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1606.78 ಅಡಿ |
| ಒಳ ಹರಿವು | 72488 ಕ್ಯುಸೆಕ್ |
| ಹೊರ ಹರಿವು | 205 ಕ್ಯುಸೆಕ್ |
| ಸಾಮರ್ಥ್ಯ | 31.658 ಟಿಎಂಸಿ |

# ಡಿಜಿಟಲ್ ಮಾಧ್ಯಮ ಹಾವಳಿಗೆ ಮುದ್ರಣ ಮಾಧ್ಯಮ ಸಂಕಷ್ಟದಲ್ಲಿದೆ

### ಹ.ಬೊ.ಹಳ್ಳಿ ತಾಲೂಕು ಕಾ.ನಿ.ಪ ಸಂಘ ಪತ್ರಿಕಾ ದಿನಾಚರಣೆಯಲ್ಲಿ ಲೇಖಕ ಎಂ.ಎಂ.ಶಿವಪ್ರಕಾಶ್ ಅಭಿಮತ



■ **ಹಂಪಿ ಟೈಮ್ಸ್, ಹಗರಿಬೊಮ್ಮನಹಳ್ಳಿ**

ಸಾಮಾಜಿಕ ಜಾಲತಾಣಗಳ ಹಾವಳಿಯಿಂದ ಮುದ್ರಣ ಮಾಧ್ಯಮ ಸಂಕಷ್ಟದಲ್ಲಿದೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಹಾಯಕ ಕುಲಸಚಿವ ಎಂ.ಎಂ.ಶಿವಪ್ರಕಾಶ್ ಬೇಸರ ವ್ಯಕ್ತಪಡಿಸಿದರು.

ಪಟ್ಟಣದ ಕನ್ನಿಕಾಪರಮೇಶ್ವರಿ ಕಲ್ಯಾಣ ಮಂಟಪದಲ್ಲಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಘಟಕದಿಂದ ಗುರುವಾರ ಹಮ್ಮಿ ಕೊಂಡಿದ್ದ ಪತ್ರಿಕಾ ದಿನಾಚರಣೆಯಲ್ಲಿ ಉಪನ್ಯಾಸ ನೀಡಿ ಮಾತನಾಡಿದರು. ಸುಳ್ಳೋ, ಸತ್ಯನೋ ಅರಿಯದ ಅನೇಕ ಕ್ಷಣ ಕ್ಷಣದ ಸುದ್ದಿಗಾಗಿ ಮೊಬೈಲ್‌ಗಳಲ್ಲಿ ಕಾಣಿಸಿಕೊಳ್ಳುವ ಸುದ್ದಿಗಳಿಂದ ಎಂಜಾಯ್ ಮಾಡುವವರು ಪತ್ರಿಕೆಗಳನ್ನಿಡಿದು ಓದುವ ತಾಳ್ಮೆಯನ್ನು ಕಳೆದುಕೊಂಡಿದ್ದಾರೆ. ಪತ್ರಿಕೆಗಳಲ್ಲಿನ ವರದಿಗಳು ಸತ್ಯದಿಂದ ಕೂಡಿರುತ್ತವೆ. ಮುದ್ರಣ ಮಾಧ್ಯಮದ ಮೇಲಿನ ಓದುಗರ ನಂಬಿಕೆ ಕಡಿಮೆ ಆಗಿಲ್ಲ. ವರದಿಗಾರರು ವರದಿಗಳನ್ನು ಪರಿಶೀಲಿಸಿ ಸುದ್ದಿ ಮಾಡಬೇಕಾಗುತ್ತದೆ. ಪರಿಸರ ಕಾಳಜಿಯ ಜೊತೆಗೆ ಪ್ರತಿಭಾವಂತರನ್ನು ಗುರುತಿಸುವಿಕೆಯಲ್ಲೂ ಸಹ ಪತ್ರಿಕೆಗಳು ಕೆಲಸ ಮಾಡುತ್ತಿವೆ. ಇಂತಹ ಸಂದರ್ಭದಲ್ಲಿ ಸ್ಥಳೀಯ ಜಿಲ್ಲೆಗಳ ಹಿರಿಯ ಪತ್ರಕರ್ತರನ್ನು ನೆನೆಯುವುದು ಮುಖ್ಯ. ಸಮಾಜದಲ್ಲಿ ಎಲೆ ಮರೆಯ ಕಾಯಿಯಂತಿರುವವರನ್ನು ಗುರುತಿಸಿ ಗೌರವ ನೀಡುತ್ತಿರುವುದು ಶ್ಲಾಘನೀಯ ಎಂದರು.

ತಹಸೀಲ್ದಾರ್ ಚಂದ್ರಶೇಖರ್ ಶಂಭಣ್ಣಗಾಳಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪತ್ರಕರ್ತರು ಯಾವುದೇ ಮೂಲಭೂತ ಸೌಲಭ್ಯಗಳಿಲ್ಲದೆ, ಕಾರ್ಯನಿರ್ವಹಿಸುವವಾಗ ಅನೇಕ ತೊಂದರೆಗಳನ್ನು ಎದುರಿಸುತ್ತಾರೆ. ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಕೆಲಸದಲ್ಲಿ ತಮ್ಮ ಜೀವನದ ಭದ್ರತೆಯನ್ನೇ ಮರೆತು ಅಲೆಯುತ್ತಿರುತ್ತಾರೆ. ಇಂತಹವರಿಗೆ ಭದ್ರತೆ ಮುಖ್ಯ ಎಂದರು.

ಪಿಎಸ್‌ಐ ಬಸವರಾಜ್ ಅಡವಿಬಾವಿ ಮಾತನಾಡಿ, ಪೊಲೀಸರಂತೆ ಪತ್ರಕರ್ತರು ಸಹ ಯಾವುದೇ ಸಮಯದಲ್ಲೂ ಕರ್ತವ್ಯ ನಿರ್ವಹಿಸುತ್ತಾರೆ. ಜೀವನದ ಹಂಗುತೊರೆದು ಹೋರಾಟಮಾಡುವವರಿಗೆ ಅನೇಕ ಸವಾಲುಗಳು ಎದುರಾಗುತ್ತವೆ. ನಿರ್ಭಯದಿಂದ ವರದಿಮಾಡಿ, ಸಮಾಜ ಘಾತುಕ ಕೆಲಸಗಳ ವಿರುದ್ಧ ವರದಿ ಮಾಡುವ ಯಾವುದೇ ವರದಿಗಳಿಗೆ ಯಾವುದೇ ಬೆದರಿಕೆ, ಎಚ್ಚರಿಕೆಗಳು ಬಂದರೂ ನಿಮ್ಮ ಬೆನ್ನಿಗೆ ನಾವು ಇರುತ್ತೇವೆ ಎಂದು ಭರವಸೆ ನೀಡಿದರು.

ತಾ.ಪಂ.ಇಒ ಪರಮೇಶ್ವರಪ್ಪ, ಜಿಲ್ಲಾಧ್ಯಕ್ಷ ಪಿ.ಸತ್ಯನಾರಾಯಣ, ರಾಜ್ಯ ಜಂಟಿ ಸಲಹಾ ಸಮಿತಿ ಸದಸ್ಯ ಹಾಗೂ ಶಾಸಕರ ಆಪ್ತ ಸಹಾಯಕ ಬಿ. ದೊಡ್ಡಬಸಪ್ಪ ರೆಡ್ಡಿ, ಬಿಇಒ ಮೈಲೇಶ್ ಬೇವೂರ್, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಆಂಜನೇಯ ಹುಲ್ಲಾಳ್, ಕರ್ನಾಟಕ ಮಾಧ್ಯಮ ಆಕಾಡೆಮಿ ಸದಸ್ಯ ಕೆ.ನಿಂಗಜ್ಜ ಹಾಗೂ ತಾಲೂಕು ಅಧ್ಯಕ್ಷ ಉಮಾಪತಿ ಶೆಟ್ಟರ್ ಮಾತನಾಡಿದರು.

ಕಾನಿಪ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಲಕ್ಷ್ಮಣ, ತಾಲೂಕು ಕಾರ್ಯದರ್ಶಿ ಭೀಮರಾಜ್, ಖಜಾಂಚಿ ರಾಜಾವಲಿ ಗಡ್ಡದ್, ವೀರೇಶ್ ಮಜ್ಗಿ, ಅಕ್ಕಂಡಿ ಬಸವರಾಜ್, ಬಿ.ಕೆ.ಬಸವರಾಜ್, ವಿಶ್ವನಾಥ ಬಾವಿಕಟ್ಟಿ ಮತ್ತಿತರರು ಇದ್ದರು. ತಾಲೂಕಿನ 19 ಜನ ಆಂಬ್ಯುಲೆನ್ಸ್ ಚಾಲಕರಿಗೆ ಅವರ ಸೇವೆಯನ್ನು ಗುರುತಿಸಿ ಸಂಘದಿಂದ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು. ಜಿಲ್ಲಾ ಉಪಾಧ್ಯಕ್ಷ ಬುಡ್ಡಿ ಬಸವರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾರದ ಮಂಜುನಾಥ ಮತ್ತು ಸೋಮನಾಥ ಸಂಗಡಿಗರು ಪ್ರಾರ್ಥಿಸಿದರು. ಪತ್ರಕರ್ತರಾದ ಸಿ.ಶಿವಾನಂದ, ಜೆ.ನಾಗರಾಜ್, ಉಪ್ಪಾರ್ ಅಶೋಕ ಹಾಗೂ ಪಟ್ಟಣ ಶೆಟ್ಟಿ ಮಂಜುನಾಥ ನಿರ್ವಹಿಸಿದರು.




# ಕಾನೂನು ತರಬೇತಿಗೆ ಅವಧಿ ವಿಸ್ತರಣೆ

**ಮೊದಲ ಪುಟದಿಂದ**

ಮಿತಿ ಪ್ರವರ್ಗ–1ರ ಅಭ್ಯರ್ಥಿಗಳಿಗೆ 3.50 ಲಕ್ಷ ರೂ., ಪ್ರವರ್ಗ–2ಎ, 3ಎ ಮತ್ತು 3ಬಿ 2.50 ಲಕ್ಷ ರೂ.ಗಳ ವಾರ್ಷಿಕ ಆದಾಯದ ಮಿ ನಿಗದಿಪಡಿಸಲಾಗಿದೆ.
ಆಯ್ಕೆಯಾದ ಅಭ್ಯರ್ಥಿಗಳನ್ನು ಜಿಲ್ಲಾ ಸಮಿತಿಯು ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್, ಸರ್ಕಾರಿ ವಕೀಲರು ಅಥವಾ ಕನಿಷ್ಟ 15 ವರ್ಷಗಳ ವೃತ್ತಿಯಲ್ಲಿ ಅನುಭವ ಹೊಂದಿರುವ ವಕೀಲರ ಅಧೀನದಲ್ಲಿ ತರಬೇತಿ ಪಡೆಯುತ್ತಾರೆ.
ಅಭ್ಯರ್ಥಿಗಳನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯಿಂದ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು. ಅಭ್ಯರ್ಥಿಗಳು ಅರ್ಜಿಯ ಜೊತೆಗೆ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಅಥವಾ ಶಾಲಾ ವರ್ಗಾವಣೆ ಪ್ರಮಾಣ ಪತ್ರ ಮತ್ತು ಪದವಿ ಹಾಗೂ ಕಾನೂನು ಪದವಿಗಳಲ್ಲಿ ಪಡೆದ ಅಂಕಪಟ್ಟಿ ಪ್ರಮಾಣ ಪತ್ರದ ದೃಢೀಕರಣ ಪ್ರತಿಗಳನ್ನು ಲಗತ್ತಿಸಬೇಕು.
ಅಪೂರ್ಣವಾದ ಹಾಗೂ ಕೊನೆಯ ದಿನಾಂಕದ ನಂತರ ಬಂದ ಅರ್ಜಿಯನ್ನು ಯಾವುದೇ ಮುನ್ಸೂಚನೆ ಇಲ್ಲದೇ ತಿರಸ್ಕರಿಸಲಾಗುವುದು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಚೇರಿ, ಮಾರುತಿ ನಿಲಯ, 35ನೇ ವಾರ್ಡ್, ಪುಣ್ಯಾನಂದಪುರಿ ನಗರ ಆಕಾಶವಾಣಿ ಹತ್ತಿರ, ಹೊಸಪೇಟೆ ಇಲ್ಲಿಕಚೇರಿ ವೇಳೆಯಲ್ಲಿ ಅರ್ಜಿ ನಮೂನೆಯನ್ನು ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08394–796292 ಸಂಪರ್ಕಿಸಬಹುದಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರಗತಿ ಕೃಷ್ಣ ಸೌಹಾರ್ದ ಪತ್ತಿನ ಸಹಕಾರಿ ಸಂಘ (ನಿ)

**ಪ್ರಧಾನ ಕಛೇರಿ, ಜೆ.ಕೆ.ಎಸ್. ಕಾಂಪ್ಲೆಕ್ಸ್ ಮೇನ್ ಬಜಾರ್, ಹೊಸಪೇಟೆ.**
**ನೋಂದಣಿ ಸಂಖ್ಯೆ.ಸ.ನಿ.23/ಸೌ.ಕಾ./ಎ.ಓ.ಟಿ/4178/2016–17, ದಿನಾಂಕ 15–02–2017**

**ಎಂಟನೇ ವಾರ್ಷಿಕ ಮಹಾಸಭೆಯ ನೋಟೀಸು**

ಈ ಮೂಲಕ ನಮ್ಮ ಎಲ್ಲಾ ಷೇರುದಾರರಿಗೆ/ ಸದಸ್ಯರಿಗೆ ತಿಳಿಸುವುದೇನೆಂದರೆ, ಮೇಲ್ಕಂಡ ಸಹಕಾರಿ ಸಂಘ ನಿಯಮಿತದ ಎಂಟನೇ ವಾರ್ಷಿಕ ಮಹಾಸಭೆಯನ್ನು ಇದೇ 2024 ರ ಅಗಸ್ಟ 17 ರಂದು ಅಂದರೆ **17.08.2024 ರಂದು ಶನಿವಾರ ಬೆಳಗ್ಗೆ 11.00** ಗಂಟೆಗೆ, ಸ್ಟೇಷನ್ ರಸ್ತೆ, **ರೋಟರಿ ಕ್ಲಬ್ ಸಭಾಂಗಣ ಹೊಸಪೇಟೆಯಲ್ಲಿ** ನಡೆಸಲು ತೀರ್ಮಾನಿಸಲಾಗಿದೆ. ಈ ಸಂಬಂಧದ ಸುತ್ತೋಲೆಯನ್ನು ಎಲ್ಲಾ ಸದಸ್ಯರಿಗೆ ವೈಯಕ್ತಿಕವಾಗಿ ತಲುಪಿಸಲಾಗಿದೆ.

ಒಂದು ಪಕ್ಷ ಸುತ್ತೋಲೆ ತಲುಪಿಲ್ಲದವರು ಇದನ್ನೇ ಸುತ್ತೋಲೆಯೆಂದು ಪರಿಗಣಿಸಿ ಸಭೆಗೆ ಹಾಜರಾಗಿ ಸಂಘದ ಮುನ್ನಡೆಗೆ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಬೇಕಾಗಿ ಕೋರಿಕೆ.

**ಸ್ಥಳ : ಹೊಸಪೇಟೆ**
**ದಿನಾಂಕ : 26.07.2024**

ಸಹಿ/
**ಶ್ರೀ ಜಿ ಭರಮಪ್ಪ**
ಅಧ್ಯಕ್ಷರು

ಸಹಿ/
**ಶ್ರೀ ಹೆಚ್.ಎಂ.ಸಣ್ಣಸಿದ್ದಯ್ಯ**
ಸಿ.ಇ.ಓ.

# ವೈದ್ಯರ ಸಲಹೆ ಇಲ್ಲದೆ ಅನಗತ್ಯ ಸ್ಕ್ಯಾನಿಂಗ್ ಮಾಡಿಸಬೇಡಿ

### ಜಿಲ್ಲಾ ಆರೋಗ್ಯ, ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್‌ಬಾಬು ಸಲಹೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಸಾರ್ವಜನಿಕರು ವೈದ್ಯರ ಸಲಹೆ ಇಲ್ಲದೆ ಅನಗತ್ಯವಾಗಿ ಸ್ಕ್ಯಾನಿಂಗ್ ಮಾಡಿಸಬಾರದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಸಲಹೆ ನೀಡಿದರು.

ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನದಡಿ ಜಿಲ್ಲೆಯಾದ್ಯಂತ ಗಂಡಾಂತರ ಗರ್ಭಿಣಿಯರ ಆರೋಗ್ಯ ತಪಾಸಣೆ ನಡೆಯುತ್ತಿರುವ ಹಿನ್ನಲೆಯಲ್ಲಿ ಬುಧವಾರದಂದು, ಸಿದ್ದಮ್ಮನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ, ಖುದ್ದು ಗರ್ಭಿಣಿಯರ ತಪಾಸಣೆ ಕೈಗೊಂಡು ಅವರು ಮಾತನಾಡಿದರು.

ಹೆಣ್ಣು ಮಕ್ಕಳಿಗೆ 18 ವರ್ಷ ತುಂಬಿದ ನಂತರವೇ ಮದುವೆ ಮಾಡಬೇಕು. ಗರ್ಭಿಣಿಯಂದು ಗೊತ್ತಾದ ಕೂಡಲೇ ಆರೋಗ್ಯ ಇಲಾಖೆಯಲ್ಲಿ ನೋಂದಣಿ ಮಾಡಿಸಿ, ತಾಯಿ ಕಾರ್ಡ್ ಪಡೆಯಬೇಕು. ವೈದ್ಯರ ಸಲಹೆ ಇಲ್ಲದೆ ಅನಗತ್ಯವಾಗಿ ಸ್ಕ್ಯಾನಿಂಗ್ ಮಾಡಿಸಬಾರದು. ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಹೆರಿಗೆಗೆ ಆದ್ಯತೆ ನೀಡಬೇಕು ಎಂದು ಅವರು ತಿಳಿಸಿದರು.

ಪ್ರಸ್ತುತ ಜಿಲ್ಲೆಯ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ನುರಿತ ವೈದ್ಯರು ಮತ್ತು ಸಿಬ್ಬಂದಿಯವರಿಂದ ಉಚಿತ ಹೆರಿಗೆ ಸೇವೆ ನೀಡಲಾಗುತ್ತಿದೆ. ಜೊತೆಗೆ ಮಗುವನ್ನು ಬೆಚ್ಚಗಿನ ವಾತಾವರಣ ಕಲ್ಪಿಸಲು ಆಸ್ಪತ್ರೆಗಳಲ್ಲಿ 'ಬೇಬಿ ವಾರ್ಮರ್' ಸೌಲಭ್ಯ ಸಹಿತ ಇದ್ದು, ಮಗುವಿನ ಅಗತ್ಯ ಕಾಳಜಿ ವಹಿಸಲಾಗುತ್ತಿದೆ ಎಂದು ಹೇಳಿದರು.

ಗರ್ಭಿಣಿಯರು ಪ್ರತಿದಿನ ಸ್ಥಳೀಯವಾಗಿ ದೊರಕುವ ತರಕಾರಿ, ಹಸಿರು ತಪ್ಪಲು ಪಲ್ಯ, ಬೇಳೆಕಾಳು, ಮೊಳಕೆ ಕಾಳು, ಹಾಗೂ ಇಲಾಖೆಯಿಂದ ನೀಡುವ ಕಬ್ಬಿಣಾಂಶ ಮಾತ್ರೆ ಸೇವಿಸಬೇಕು. ತಾಯಿಯ ಆರೋಗ್ಯದ ಪರೀಕ್ಷೆಗಳನ್ನು ಕೈಗೊಂಡಾಗ ಕಂಡು ಬರುವ ಆರೋಗ್ಯದ ಸಮಸ್ಯೆಗಳಿಗೆ ಸೂಕ್ತ ಚಿಕಿತ್ಸೆ ಮತ್ತು ಆರೈಕೆ ಪಡೆಯಬೇಕು ಎಂದು ವಿನಂತಿಸಿದರು.





**ಗರ್ಭಿಣಿಯರ ಸ್ಕ್ಯಾನಿಂಗ್:**

ಗರ್ಭಿಣಿಯೆಂದು ತಿಳಿದ ನಂತರ ವೈದ್ಯರ ಸಲಹೆಯಂತೆ, ಎರಡುವರೆ ತಿಂಗಳಿನಿಂದ ಮೂರುವರೆ ತಿಂಗಳು ಅವಧಿಯಲ್ಲಿ ಸಹಜವಾಗಿ ಮೊದಲ ಬಾರಿ, ನಾಲ್ಕುವರೆ ತಿಂಗಳಿನಿಂದ ಐದುವರೆ ತಿಂಗಳಿನಲ್ಲಿ ಎರಡನೇ ಬಾರಿ, ಎಂಟು ವರೆ ತಿಂಗಳಿನಿಂದ ಒಂಭತ್ತನೇಯ ತಿಂಗಳಿನಲ್ಲಿ ಮೂರನೆಯ ಬಾರಿ ಸ್ಕ್ಯಾನಿಂಗ್ ಮಾಡಿಸಬೇಕು. ಒಂದು ವೇಳೆ ತೀರ ಅಗತ್ಯವೆನಿಸಿದಲ್ಲಿ ಮಾತ್ರ ತಜ್ಞರ ಸಲಹೆ ಯಂತೆ ಹೆಚ್ಚುವರಿಯಾಗಿ ಸ್ಕ್ಯಾನಿಂಗ್ ಮಾಡಿಸಬೇಕು. ಅನಗತ್ಯವಾಗಿ ಸ್ಕ್ಯಾನ್ ಮಾಡಿಸಬಾರದು ಎಂದು ತಿಳಿಸಿದರು.

**ಗಂಡಾಂತರ ಗರ್ಭಿಣಿಯರು ಯಾರು?:**

ಗಂಡಾಂತರ ಗರ್ಭಿಣಿಯೆಂದು ನಿರ್ಧರಿಸುವ ಅಂಶಗಳಾದ 18 ವರ್ಷಕ್ಕಿಂತ ಮೊದಲು ಅಥವಾ 30 ವರ್ಷ ವಯಸ್ಸಿನ ನಂತರ ಗರ್ಭಿಣಿಯಾದರೆ, ರಕ್ತದಲ್ಲಿ ಕಬ್ಬಿಣಾಂಶ 9 ಕ್ಕಿಂತ ಕಡಿಮೆ, ಎತ್ತರ 142 ಸೆಂ.ಮೀ ಗಿಂತ ಕಡಿಮೆ, ರಕ್ತದೊತ್ತಡ 140/90 ಗಿಂತ ಹೆಚ್ಚು, ಅವಳಿ–ಜವಳಿ ಗರ್ಭಿಣಿ, ಮೊದಲ ಹೆರಿಗೆ ಶಸ್ತ್ರಚಿಕಿತ್ಸೆ ಮೂಲಕವಾದಲ್ಲಿ, ಹೆಚ್‌ಐವಿ, ಹೆಚ್‌ಬಿಎಸ್ ಎಸಿಜಿ, ಮುರ್ಛೆರೋಗ, ಥೈರಾಯ್ಡ್, ಹೈಪೊಥೈರಾಯ್ಡ್, ರಕ್ತ ಸಂಬಂಧಿತ ಖಾಯಿಲೆಗಳಿದ್ದಲ್ಲಿ, ಗರ್ಭಕೋಶದ ಬೆಳವಣಿಯ ತೊಂದರೆ, ಸ್ಕ್ಯಾನಿಂಗ್‌ನಲ್ಲಿ ಮಗು ಅಡ್ಡಲಾಗಿ ಇರುವುದು ಕಂಡುಬಂದಲ್ಲಿ, ಮಾಸದ ಸ್ಥಳದ ಅಡಚಣೆ (ಪ್ಲಸೇಂಟಾ ಪ್ರಿವಿಯಾ) ಮುಂತಾದ ತೊಂದರೆಗಳು ಇರುವವರು ವೈದ್ಯರ ನಿರ್ದೇಶನ ಮೇರೆಗೆ ಸ್ಥಳಿಯ ವೈದ್ಯಕೀಯ ಸಿಬ್ಬಂದಿಯವರ ಸಲಹೆಯಂತೆ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಬೇಕು ಎಂದು ತಿಳಿಸಿದರು.

ಈ ವೇಳೆ ಸಿದ್ದಮ್ಮನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ದಿವ್ಯಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಔಷಧಾಧಿಕಾರಿ ವೀಣಾ, ಶುಶ್ರೂಷಣಾಧಿಕಾರಿ ಸುನೀತಾ, ವೈದ್ಯಕೀಯ ಪ್ರಯೋಗ ಶಾಲಾ ತಂತ್ರಜ್ಞೆ ಶ್ವೇತಾ ಸೇರಿದಂತೆ ಆಶಾ, ತಾಯಂದಿರು ಹಾಗೂ ಇತರರು ಉಪಸ್ಥಿತರಿದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi

ಮನಸ್ಸು ಮಾಡು – ಕರ್ತವ್ಯ ನಿಷ್ಟನಾಗು – ಕಾದು ನೋಡು

SCAN & READ E-PAPER

SSLC SCIENCE Hampi Times Margadarshi 2024-25

www.hampitimes.com - Hampi Times Margadarshi

## ಅಧ್ಯಾಯ 2 : ವಿದ್ಯುಚ್ಛಕ್ತಿ

**1.ವಿದ್ಯುತ್ ಪ್ರವಾಹದ ಅರ್ಥ ಬರೆದು ಅಳೆಯುವ ಸಾಧನ, ಗಣಿತೀಯ ಸೂತ್ರ ಮತ್ತು ಏಕಮಾನ ತಿಳಿಸಿ. (ಮಾರ್ಚ್ –2023)**

ಉ: ವಿದ್ಯುತ್ ಆವೇಶ ಕಣಗಳ ಪ್ರವಹಿಸುವಿಕೆ ದರವೇ ವಿದ್ಯುತ್ ಪ್ರವಾಹ.

ಅಳೆಯುವ ಸಾಧನ : ಅಮ್ಮಿಟರ್.

ಗಣಿತೀಯ ಸೂತ್ರ : $I=Q/T$

ಏಕಮಾನ : ಆಂಪಿಯರ್ (A).

**2. ವಿದ್ಯುತ್ ವಿಭವಾಂತರ ಅರ್ಥ ತಿಳಿಸಿ. ಅದನ್ನು ಅಳೆಯುವ ಸಾಧನ, ಗಣಿತೀಯ ಸೂತ್ರ ಹಾಗೂ ಏಕಮಾನ ಬರೆಯಿರಿ? (ಏಪ್ರಿಲ್–2019, 2020.)**

ಉ: ಒಂದು ಏಕಮಾನ ಆವೇಶವನ್ನು ಒಂದು ಬಿಂದುವಿನಿಂದ ಇನ್ನೊಂದು ಬಿಂದುವಿಗೆ ತರುವಲ್ಲಿ ಆಗುವ ಕೆಲಸವೇ ವಿಭಾವಂತರ.

ಅಳೆಯುವ ಸಾಧನ: ವೋಲ್ಟ್ ಮೀಟರ್.

ಗಣಿತೀಯ ಸೂತ್ರ: $V=W/Q$

ಏಕಮಾನ: ವೋಲ್ಟ್ (V).

**3. ಓಮನ ನಿಯಮವನ್ನು ವ್ಯಾಖ್ಯಾನಿಸಿ? ಗಣಿತೀಯ ಸೂತ್ರ ಬರೆಯಿರಿ. (ಏಪ್ರಿಲ್–2020)**

ಉ : ಒಂದು ನಿರ್ದಿಷ್ಟ ತಾಪಮಾನದಲ್ಲಿ ರೋಧಕದ ಮೂಲಕ ಹರಿಯುವ ವಿದ್ಯುತ್ ಪ್ರವಾಹವು ಅದರ ನಡುವಿನ ವಿಭವಾಂತರಕ್ಕೆ ನೇರ ಅನುಪಾತದಲ್ಲಿರುತ್ತವೆ.

ಗಣಿತೀಯ ಸೂತ್ರ: $V= IR$

**4. ವಿದ್ಯುತ್ ರೋಧ ಎಂದರೇನು? ಅದನ್ನು ಅಳೆಯುವ ಸಾಧನ, ಗಣಿತೀಯ ಸೂತ್ರ ಹಾಗೂ ಏಕಮಾನವನ್ನು ಬರೆಯಿರಿ. (ಏಪ್ರಿಲ್–2021)**

ಉ : ವಿದ್ಯುತ್ ಪ್ರವಾಹಕ್ಕೆ ತಡೆಯುಂಟು ಮಾಡುವ ವಾಹಕದ ಗುಣವೇ ರೋಧ.

ಅಳೆಯುವ ಸಾಧನ: ಓಮ್ ಮೀಟರ್.

ಗಣಿತೀಯ ಸೂತ್ರ: $R=V/I$

ಏಕಮಾನ: ಓಮ್ ($\Omega$).

**5. ರೋಧ ಅವಲಂಬಿಸಿರುವ ಅಂಶಗಳು ಯಾವುವು? (ಮಾರ್ಚ್ –2023)**

ಉ : 1. ವಾಹಕದ ಉದ್ದ. 2. ವಾಹಕದ ಅಡ್ಡಕೊಯ್ತ.
3. ವಾಹಕದ ಪ್ರಾಕೃತಿಕ ಗುಣ. 4. ತಾಪ.

**6) ಜೌಲನ ಉಷ್ಣೋತ್ಪಾದನಾ ನಿಯಮ ವ್ಯಾಖ್ಯಾನಿಸಿ, ಇದರ ಆಧಾರದ ಮೇಲೆ ಕಾರ್ಯನಿರ್ವಹಿಸುವ ಉಪಕರಣಗಳನ್ನು ಪಟ್ಟಿಮಾಡಿ. (ಮಾರ್ಚ್ –2023)**

ಉ:– **ರೋಧಕದಲ್ಲಿ ಉತ್ಪತ್ತಿಯಾದ ಉಷ್ಣವು,**

**i) ಕೊಟ್ಟಿರುವ ರೋಧದಲ್ಲಿ ಪ್ರವಹಿಸುತ್ತಿರುವ ವಿದ್ಯುತ್‌ಪ್ರವಾಹದ ವರ್ಗಕ್ಕೆ ನೇರಾನುಪಾತದಲ್ಲಿರುತ್ತದೆ.**

**ii) ಕೊಟ್ಟಿರುವ ವಿದ್ಯುತ್ ಪ್ರವಾಹಕ್ಕೆ, ರೋಧವು ನೇರ ಅನುಪಾತದಲ್ಲಿರುತ್ತದೆ**

**iii) ರೋಧಕಗಳ ಮೂಲಕ ಹರಿಯುವ ವಿದ್ಯುತ್‌ಪ್ರವಾಹದ ಕಾಲಕ್ಕೆ ನೇರ ಅನುಪಾತದಲ್ಲಿರುತ್ತದೆ.**

ಕಾರ್ಯನಿರ್ವಹಿಸುವ ಉಪಕರಣಗಳು: ವಿದ್ಯುತ್ ಒಲೆ, ವಿದ್ಯುತ್ ಹೀಟರ್, ವಿದ್ಯುತ್ ಬಲ್ಬ್, ಫ್ಯೂಸ್.

**7) ವಿದ್ಯುತ್ ಸಾಮರ್ಥ್ಯ ಎಂದರೇನು? ಅದರ ಗಣಿತೀಯ ಸೂತ್ರ , SI ಏಕಮಾನ ಮತ್ತು ವ್ಯಾವಹಾರಿಕ ಏಕಮಾನ ಬರೆಯಿರಿ**

ಉ : ವಿದ್ಯುತ್ ಮಂಡಲದಲ್ಲಿ ಶಕ್ತಿ ಬಳಕೆಯಾಗುವ ದರ ಅಥವಾ ಕ್ಷೀಣಿಸುವ ದರವೇ ವಿದ್ಯುತ್ ಸಾಮರ್ಥ್ಯ.

ಗಣಿತೀಯ ಸೂತ್ರ : $P=V/I$

ಏಕಮಾನ : ವ್ಯಾಟ್ (W)

ವ್ಯಾವಹಾರಿಕ ಏಕಮಾನ : **ಕಿಲೋ ವ್ಯಾಟ್ ಘಂಟೆ (KWh) .**

**8. ವಿದ್ಯುತ್ ಉಪಕರಣಗಳನ್ನು ಸರಣಿಯಲ್ಲಿ ಜೋಡಿಸುವುದಕ್ಕಿಂತ ಸಮಾಂತರವಾಗಿ ಜೋಡಿಸುವುದು ಅನುಕೂಲಕರ. ಏಕೆ? ಅಥವಾ**

**ಗೃಹಬಳಕೆ ವಿದ್ಯುತ್ ಮಂಡಲದಲ್ಲಿ ವಿದ್ಯುತ್ ಉಪಕರಣಗಳನ್ನು ಸರಣಿಕ್ರಮದಲ್ಲಿ ಸಂಪರ್ಕಗೊಳಿಸುವುದಿಲ್ಲ. ಏಕೆ? ಅಥವಾ**

**ಗೃಹಬಳಕೆ ವಿದ್ಯುತ್ ಮಂಡಲದಲ್ಲಿ ವಿದ್ಯುತ್ ಉಪಕರಣಗಳನ್ನು ಸರಣಿಕ್ರಮದಲ್ಲಿ ಜೋಡಿಸಿದಾಗ ಆಗುವ ಎರಡು ಅನಾನುಕೂಲಗಳನ್ನು ತಿಳಿಸಿ.**

**(ಜೂನ್–2019,ಏಪ್ರಿಲ್–2022, ಜುಲೈ–2022)**

ಉ: ಸರಣಿ ಜೋಡಣೆಯಲ್ಲಿ ಮಂಡಲದಲ್ಲಿ ಹರಿಯುವ ವಿದ್ಯುತ್ ಪ್ರವಾಹವು ಎಲ್ಲಾ ಭಾಗದಲ್ಲಿಯೂ ಸ್ಥಿರವಾಗಿರುತ್ತದೆ. ಆದ ಕಾರಣ ವಿದ್ಯುತ್ ಪ್ರವಾಹದ ಒಂದೇ ಮೌಲ್ಯದಲ್ಲಿ ಎಲ್ಲಾ ಉಪಕರಣಗಳು ಕಾರ್ಯ ನಿರ್ವಹಿಸಲು ಸಾಧ್ಯವಿಲ್ಲ.

* ಯಾವುದಾದರೂ ಒಂದುಘಟಕ/ಉಪಕರಣ ವಿಫಲವಾದರೆ ಮಂಡಲವು ಮುರಿದು ಹೋಗುತ್ತದೆ. ಮುಂದಿನ ಯಾವುದೇ ಘಟಕಗಳು ಕಾರ್ಯನಿರ್ವಹಿಸುವುದಿಲ್ಲ.

ಆದ್ದರಿಂದ ಸಮಾಂತರ ಜೋಡಣೆ ಅನುಕೂಲಕರ.

**9. ಒಂದು ವಿದ್ಯುತ್ ಮಂಡಲದಲ್ಲಿ ಆಮ್ಮೀಟರ್ ಮತ್ತು ವೋಲ್ಟ್ ಮೀಟರ್‌ಗಳನ್ನು ಹೇಗೆ ಸಂಪರ್ಕಿಸಬೇಕು? ವಿದ್ಯುನ್ಮಂಡಲದಲ್ಲಿ ಈ ಉಪಕರಣಗಳ ಉಪಯೋಗವೇನು? (ಏಪ್ರಿಲ್–2020)**

ಉ: * ಅಮ್ಮೀಟರ್‌ನ್ನು ಸರಣಿಕ್ರಮದಲ್ಲಿ ಜೋಡಿಸಬೇಕು.
* ವೋಲ್ಟ್ ಮೀಟರ್ ಅನ್ನು ಸಮಾಂತರವಾಗಿ ಜೋಡಿಸಬೇಕು.
* ಅಮ್ಮೀಟರ್‌ನ್ನು ವಿದ್ಯುತ್ ಪ್ರವಾಹ ಅಳತೆ ಮಾಡಲು ಬಳಸುತ್ತಾರೆ.
* ವೋಲ್ಟ್ ಮೀಟರನ್ನು ವಿದ್ಯುತ್ ವಿಭವಾಂತರ ಅಳತೆ ಮಾಡಲು ಬಳಸುತ್ತಾರೆ.

**9. ವಾಹಕದ ತಂತಿ, ಅಮ್ಮೀಟರ್, ಪ್ಲಗ್ ಕೀ, ವಿದ್ಯುತ್ಕೋಶ, ವಿದ್ಯುತ್ ಬಲ್ಬ್ ಳನ್ನು ಒಳಗೊಂಡ ಸರಳ ವಿದ್ಯುತ್ ಮಂಡಲದ ರೇಖಾಚಿತ್ರ ರಚಿಸಿ. (ಏಪ್ರಿಲ್–2022)**

ಉ :– ಭಾಗ 1 ಪಠ್ಯ ಪುಸ್ತಕದ ಪುಟ ಸಂಖ್ಯೆ 92 ರಲ್ಲಿ ಚಿತ್ರ 11.1 ಗಮನಿಸು.

**10) ವಿದ್ಯುತ್ ಮಂಡಲದಲ್ಲಿ ಸಾಮಾನ್ಯವಾಗಿ ಉಪಯೋಗಿಸುವ ಚಿಹ್ನೆಗಳು. (ಮಾರ್ಚ್–2023, ಜೂನ್–2023)**

ಉ :– ಭಾಗ 1 ಪಠ್ಯ ಪುಸ್ತಕದ ಪುಟ ಸಂಖ್ಯೆ 95 ರಲ್ಲಿ ಕೋಷ್ಟಕ 11.1 ಗಮನಿಸು.

**11) ಸರಣಿ ಹಾಗೂ ಸಮಾಂತರ ಜೋಡಣೆಯ ರೋಧಕಗಳ ರೇಖಾಚಿತ್ರ ಬರೆಯಿರಿ (ಏಪ್ರಿಲ್–2019)**

ಉ :– ಭಾಗ 1 ಪಠ್ಯ ಪುಸ್ತಕದ ಪುಟ ಸಂಖ್ಯೆ 104. ಚಿತ್ರ 11.6 ಹಾಗೂ 11.7 ಗಮನಿಸು.

### ವಿದ್ಯಾರ್ಥಿಗಳಿಗೆ ಕೆಲ ಸಲಹಾತ್ಮಕ ಸೂಚನೆಗಳು :–

* ಮೇಲೆ ನೀಡಿರುವ ಪ್ರಶ್ನೆ –ಉತ್ತರಗಳು ಮಾದರಿಗಳು ಮಾತ್ರ.
* ವಿದ್ಯಾರ್ಥಿಗಳು ಕೇವಲ ಪ್ರಶ್ನೆ –ಉತ್ತರಕ್ಕೆ ಅಂಟಿಕೊಳ್ಳದೇ, ತತ್ವಗಳನ್ನು ಅರ್ಥೈಸಿಕೊಂಡರೆ ಉತ್ತೀರ್ಣತೆಗೆ ಬೇಕಾದ ಅಂಕಗಳನ್ನು ಸುಲಭವಾಗಿ ಗಳಿಸಬಹುದು.
* ವಿದ್ಯಾರ್ಥಿಗಳು ಅನ್ವಯಿಕ ಪ್ರಶ್ನೆಗಳಿಗೆ ಹೆಚ್ಚು ಒತ್ತು ಕೊಡಬೇಕು.

ಮಾರ್ಗದರ್ಶಿ ಶಿಕ್ಷಕರು: **ಶಿವತನಯ ಎಸ್.ಸಿ,** ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು. ಹ.ಬೊ.ಹಳ್ಳಿ ತಾ. ವಿಜಯನಗರ ಜಿ

**ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನ ಮಠ, ಹೊಸಪೇಟೆ**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA